ವೈಚಾರಿಕ ತಿಂಗಳ ಡೈಜೆಸ್ಟ್

ಜನಪದ ಸೇವಾ ಟ್ರಸ್ಟ್ ಪ್ರಕಟಣೆ

ಸಂಪುಟ ೧ ಫೆಬ್ರವರಿ, ೨೦೦೧ ಸಂಚಿಕೆ ೭

ಗುಜರಾತ್ ಭೂಕಂಪ : ಮಾನವನಿಗೆ ಸಂಕೇತಗಳಿವೆಯೊ?

★

ಅಮೇರಿಕೆಯ ಹೊಸ ಅಧ್ಯಕ್ಷರ ಇನ್ನೊಂದು ಮುಖ

★

"ಸುಜನಾ"–ಓರ್ವ ಸಾಮಾಜಿಕ ಚಿಂತಕ

★

ಪ್ರಜಾಸತ್ತೆಗೆ ಜನಶಕ್ತಿಯೆ ಅಂತಿಮ ಅಧಿಷ್ಠಾನ

★

ಸದಾಚಾರ ವಿಧಾಯಿನಿ

೧. ಗುಜರಾತ್ ಭೂಕಂಪ : ಮಾನವನಿಗೆ ಸಂಕೇತಗಳಿವೆಯೋ

–ಸುರೇಂದ್ರ ಕೌಲಗಿ

ಪ್ರಾಕೃತಿಕ ದುರಂತಗಳು ಮಾನವನಿಗೆ ಏನಾದರೂ ಸಂಕೇತಗಳನ್ನು ಕೊಡುತ್ತಿವೆಯೋ ಹೇಗೆ ಎಂಬ ಬಗ್ಗೆ ಪ್ರತಿಯೊಬ್ಬರೂ ಆಲೋಚಿಸುವ ಅಗತ್ಯ ಇದೆ ಎಂಬುದಾಗಿ ಈ ಲೇಖನದಲ್ಲಿ ಪ್ರತಿಪಾದಿಸಲಾಗಿದೆ. ಪುಟ ೨

೨. ಅಮೆರಿಕಾದ ಹೊಸ ಅಧ್ಯಕ್ಷರ ಇನ್ನೊಂದು ಮುಖ

–ಪುಣ್ಯಪ್ರಿಯ ದಾಸಗುಪ್ತ

ಜಾರ್ಜ್ ಬುಷ್ ಅಮೆರಿಕಾ ಸಂಯುಕ್ತ ಸಂಸ್ಥಾನದ ಹೊಸ ಅಧ್ಯಕ್ಷರು. ಹಳೆಯ ಕಾಲದ ಗುಲಾಮಗಿರಿಯ ಸಮರ್ಥಕ; ವರ್ಣದ್ವೇಷಿ ಮತ್ತು ಪರಿಸರ ವಿರೋಧಿ ಇರಬಹುದೆಂಬ ಭೀತಿಯನ್ನು ಈ ಲೇಖನದಲ್ಲಿ ವ್ಯಕ್ತಪಡಿಸಲಾಗಿದೆ. ಪುಟ ೪

೩. ಓರ್ವ ಸಾಮಾಜಿಕ ಚಿಂತಕನಾಗಿ ಸಾಹಿತಿ "ಸುಜನಾ"

–ಸುರೇಂದ್ರ ಕೌಲಗಿ

'ಸುಜನಾ' ಕನ್ನಡದ ಹಿರಿಯ ಸಾಹಿತಿಗಳಲ್ಲಿ ಒಬ್ಬರು. ಅವರು ಕೇವಲ ಓರ್ವ ಸಾಹಿತ್ಯಕಾರರಾಗಿರದೆ ಸಾಮಾಜಿಕ ಚಿಂತಕರಾಗಿಯೂ ಇದ್ದಾರೆ ಎಂಬುದನ್ನು ಸೂಚಿಸಲು ಈ ಲೇಖನದಲ್ಲಿ ಪ್ರಯತ್ನಿಸಲಾಗಿದೆ. ಪುಟ ೯

೪. ಸದಾಚಾರ ವಿಧಾಯಿನಿ –ಬಾಬು ರಾಮಚಂದ್ರ ಶರ್ಮ

ಸದಾಚಾರದ ಗುಟ್ಟನ್ನು ಒಂದೊಂದೇ ವಾಕ್ಯದಲ್ಲಿ ಸೂತ್ರಬದ್ಧವಾಗಿ ಹೇಳಲಾಗಿದೆ ಈ ಲೇಖನದಲ್ಲಿ ಪುಟ ೧೪

೫. ತಂದೆ ರಾಜಾಜಿ –ವಿನೋಬಾ

ಸ್ವತಂತ್ರ ಭಾರತದ ಮೊದಲ ಗರ್ವನರ್ ಜನರಲ್‌ರಾಗಿದ್ದ ಚಕ್ರವರ್ತಿ ರಾಜಗೋಪಾಲಚಾರಿ ಕೇವಲ ರಾಜಕಾರಣಿಯಾಗಿರಲಿಲ್ಲ; ಆಧ್ಯಾತ್ಮಿಕ ವ್ಯಕ್ತಿಯೂ ಆಗಿದ್ದರು. ಅವರ ಜೀವನದ ಒಳನೋಟ ಇಲ್ಲಿ ಇದೆ. ಪುಟ ೧೭

೬. ಕಾನೂನು ರಚನಾಕಾರರೇ ಕಾನೂನು ಉಲ್ಲಂಘಕರು

–ಎನ್. ವಿಠಲ್

ಇಂದಿನ ನಮ್ಮ ಪ್ರಜಾಸತ್ತೆ ವ್ಯವಸ್ಥೆಯಲ್ಲಿರುವ ದೋಷಗಳಲ್ಲಿ ಒಂದು ಏನೆಂದರೆ ಕಾನೂನು ರಚಿಸುವವರೇ ಅದನ್ನು ಉಲ್ಲಂಘಿಸುತ್ತಾರೆ. ಈ ಬಗ್ಗೆ ಪರಿಹಾರ ಸೂಚಿಸಿದ್ದಾರೆ ಭಾರತದ ಕೇಂದ್ರ ಜಾಗೃತ ಆಯೋಗದ ಅಧ್ಯಕ್ಷರು. ಪುಟ ೨೩

೭. ಪ್ರಜಾಸತ್ತೆಗೆ ಜನಶಕ್ತಿಯೇ ಅಧಿಷ್ಠಾನ –ದಾದಾಧರ್ಮಾಧಿಕಾರಿ

ನಾಗರಿಕತೆಗಿಂತ ಹೆಚ್ಚು ವ್ಯಾಪಕವಾದದ್ದು ಮನುಷ್ಯನ ಮಾನವತೆ; ಸದಸ್ಯತ್ವ ಮನುಷ್ಯನನ್ನು ಬೇರೆ ಬೇರೆ ಮಾಡುತ್ತದೆ. ಆದ್ದರಿಂದ ವಿಶ್ವಮಾನವತೆಬೇಕು ಎಂದು ಇಲ್ಲಿ ತರ್ಕಮಾಡಲಾಗಿದೆ. ಪುಟ ೨೭

ಜನಪದ ವಿಚಾರ

ವೈಚಾರಿಕ ತಿಂಗಳ ಡೈಜೆಸ್ಟ್

ಸಂಪುಟ : ೧ ಸಂಚಿಕೆ : ೭

ಫೆಬ್ರವರಿ ೨೦೦೧

ಸಂಪಾದಕ

ಸುರೇಂದ್ರ ಕೌಲಗಿ

ಸಲಹಾ ಸಮಿತಿ,
ಜನಪದ ಸೇವಾ ಟ್ರಸ್ಟ್
ಧರ್ಮದರ್ಶಿ ಮಂಡಳಿ

....

ಚಂದಾ ವಿವರ :

ವಾರ್ಷಿಕ : ರೂ. ೧೦೦/-
ಅರ್ಧವಾರ್ಷಿಕ : ರೂ. ೫೦/-
ಬಿಡಿ ಸಂಚಿಕೆ : ರೂ. ೧೦/-

ಸಂಪರ್ಕ ವಿಳಾಸ :

ಜನಪದ ಸೇವಾ ಟ್ರಸ್ಟ್ (ರಿ.)
ಕಲ್ಯಾಣಿ ಬೀದಿ,
ಮೇಲುಕೋಟೆ
ಜಿಲ್ಲಾ : ಮಂಡ್ಯ. ೫೭೧ ೪೩೧.
ದೂರವಾಣಿ : ೦೮೨೩೬/೫೮೭೫೪

ಈ ಮಣ್ಣನ್ನೆಲ್ಲ
ನುಂಗಿಬಿಡುವಷ್ಟು ನೀರು
ಸಪ್ತ ಸಾಗರಗಳಲ್ಲಿ
ತುಂಬಿತುಳುಕುತ್ತಿದೆ.
ಚಂಡ ಮಾರುತಗಳ ಜೊತೆ
ಶಾಮೀಲಾಗಿ ಒಮ್ಮೊಮ್ಮೆ
ದಾಳಿಮಾಡುತ್ತೆ.
ಈ ಮಣ್ಣ ಮೇಲೆ
ಮಲಗಿ ನಿದ್ದೆಮಾಡುವಷ್ಟು
ಬೆಟ್ಟ ಪರ್ವತಗಳ ಕಲ್ಲು
ಮುಗಿಲಿಗೂ ಮೇಲೆ
ನಿಂತು ನೋಡುತ್ತಿವೆ.
ಕುದಿವ ಲಾವಾರಸದ
ಜೊತೆಬೆರೆತು
ಅಗ್ನಿಪರ್ವತಗಳಾಗಿ
ಸಿಡಿದು ಎರಗುತ್ತವೆ.
ಈ ಮಣ್ಣ
ಕಣಕಣದ ಚೈತನ್ಯವು
ಜೀವರಾಶಿಗೆ ಸೇರಿ
ಅನಂತ ಆಕಾಶದಾಚೆಗೆ
ಜಿಗಿವ ಯುಕ್ತಿ, ಬದುಕುವ ಶಕ್ತಿ
ಬೆಳಸುತ್ತಿದೆ.

– ಜರಗನಹಳ್ಳಿ, ಶಿವಶಂಕರ

ಗುಜರಾತದ ಭೂಕಂಪ : ಮಾನವನಿಗೆ ಸಂಕೇತಗಳಿವೆಯೊ?

ಜನವರಿ ೨೬ ಗಣರಾಜ್ಯೋತ್ಸವದ ಬೆಳಿಗ್ಗೆ ಗುಜರಾತ್ ರಾಜ್ಯದಲ್ಲಿ ಅತ್ಯಂತ ಭೀಕರವಾದ ಭೂಕಂಪವಾಗಿ ೨೦,೦೦೦ ಕ್ಕೂ ಹೆಚ್ಚು ಜನರು ಸತ್ತಿದ್ದಾರೆ. ೨೦,೦೦೦ ಕ್ಕೂ ಹೆಚ್ಚು ಜನ ಗಾಯಗೊಂಡಿದ್ದಾರೆ. ೧೯೯೩ ರಲ್ಲಿ ಮಹಾರಾಷ್ಟ್ರ ರಾಜ್ಯದಲ್ಲಿ ಲಾಟೂರ್ ಬಳಿ ಆದ ಭೂಕಂಪನದ ನಂತರ ಇದು ಆಗಿದೆ. ಅಲ್ಲಿಯೂ ಸಹ ೧೦,೦೦೦ ಕ್ಕೂ ಹೆಚ್ಚು ಜನ ಸತ್ತಿದ್ದರು. ಕೇಂದ್ರ ಸರ್ಕಾರವು ಇದನ್ನು "ರಾಷ್ಟ್ರೀಯ ದುರಂತ" ವೆಂದು ಘೋಷಣೆ ಮಾಡಿದೆ. ದೇಶದ ಮತ್ತು ವಿದೇಶದ ವಿವಿಧ ಭಾಗಗಳಿಂದ ಮಾನವ ಸಹಾಯ ಮತ್ತು ವಸ್ತುಗಳ ಸಹಾಯವನ್ನು ಅಲ್ಲಿಗೆ ಸಮರೋಪಾದಿಯಲ್ಲಿ ತಲುಪಿಸಲಾಗುತ್ತಿದೆ. ದುರಂತದ ಒಟ್ಟು ಪರಿಣಾಮದ ಚಿತ್ರ ಗೊತ್ತಾಗಬೇಕಾದರೆ ಇನ್ನೂ ದೀರ್ಘ ಸಮಯ ಬೇಕು. ಈಗ ದೇಶವಾಸಿಗಳ ಪ್ರಥಮ ಕರ್ತವ್ಯ ದೇಶದ ಈ ದುರಂತದಿಂದಾದ ಕಷ್ಟದ ನಿವಾರಣೆಗೆ ಎಲ್ಲ ರೀತಿಯಲ್ಲೂ ನೆರವಾಗುವುದು.

ಭೂಕಂಪನ, ಅತಿವೃಷ್ಟಿ, ಅನಾವೃಷ್ಟಿ, ಸುಂಟರಗಾಳಿ, ಜ್ವಾಲಾಮುಖಿ, ಧೂಮಕೇತುಗಳ ಸಿಡಿಯುವಿಕೆ ಮುಂತಾದ ಪ್ರಕೃತಿವಿಕೋಪಗಳ ಮುಂದೆ ಮಾನವನ ಸಾಮರ್ಥ್ಯ ಸೊನ್ನೆ ಸಮಾನ. ಪ್ರಕೃತಿ ಶಾಂತವಾಗಿರುವಾಗ ಮಾನವನ ಅಟ್ಟಹಾಸಕ್ಕೆ ಮಿತಿಯಿಲ್ಲ, ಅದೇ ಪ್ರಕೃತಿ ಮುನಿದಾಗ ಇವನ ಅಸ್ತಿತ್ವವೇ ಇಲ್ಲ. ಪ್ರಕೃತಿಯ ನಿಯಮಗಳ ನಿಯಂತ್ರಣ ಮನುಷ್ಯನಿಗೆ ಸಾಧ್ಯವಿಲ್ಲವಾದರೂ ಅವನು ಪ್ರಕೃತಿಯ ವ್ಯವಸ್ಥೆಯಲ್ಲಿ ಅಡ್ಡಗಾಲು ಹಾಕುವುದಾಗಲೀ, ಮೂಗು ತೂರುವುದಾಗಲೀ, ಅಧಿಕಪ್ರಸಂಗತನ ಮಾಡುವುದಾಗಲೀ ತರವಲ್ಲ. ಈ ರೀತಿಯ ಸ್ವಭಾವ ಮನುಷ್ಯನಲ್ಲಿ ಹೆಚ್ಚಾಗುತ್ತಿದೆ. ಬಹಳ ಇತ್ತೀಚಿಗಿನ ಉದಾಹರಣೆ ದಕ್ಷಿಣ ಅಮೆರಿಕದ ಎಲ್ ಸಾಲ್ವಡರ್ ದೇಶದಲ್ಲಿ ಆದ ಭೂ ಕುಸಿತ, ಈ ರೀತಿ ಆಗುವುದಕ್ಕೆ ಅಭಿವೃದ್ಧಿಯ ನೀತಿಯೇ ಕಾರಣವೆಂದು ಅಲ್ಲಿಯ ಪರಿಸರವಾದಿಗಳು ಅಭಿಪ್ರಾಯಪಟ್ಟಿದ್ದಾರೆ. ಭೂಮಿಯ ಮೇಲೆ ಬಹಳಷ್ಟು ಒತ್ತಡ ಉಂಟಾಗುತ್ತಿದೆ; ಹಿಮಾಲಯದ ಭಾರದಿಂದಾಗಿ ಅದರ ಒಳಗಿನ ಭೂವಲಯ ಇನ್ನೂ ಹೊಂದಾಣಿಕೆ ಮಾಡಿಕೊಳ್ಳುತ್ತಿದೆ. ಈ ಕಾರಣದಿಂದ ಉತ್ತರ ಭಾರತದಲ್ಲಿ ಭೂಕಂಪಗಳು ಹೆಚ್ಚಾಗಿ ಆಗುತ್ತಿವೆ. ಈ ಕಾರಣದಿಂದಲೇ ಹಿಮಾಲಯದ ತಪ್ಪಲಿನಲ್ಲಿ ನಿರ್ಮಾಣವಾಗುತ್ತಿರುವ

ತೆಹರಿ ಅಣೆಕಟ್ಟನ್ನು ಸುಂದರಲಾಲ್ ಬಹುಗುಣ ವಿರೋಧಿಸುತ್ತಿದ್ದಾರೆ. ಈಗ ಭೂಕಂಪಕ್ಕೆ ಒಳಗಾಗಿರುವ ರಾಜ್ಯ ಗುಜರಾತಿನಲ್ಲಿ ನರ್ಮದಾ ನದಿಗೆ ಅಡ್ಡಲಾಗಿ ಸರ್ದಾರ್ ಸರೋವರ ಅಣೆಕಟ್ಟನ್ನು ಕಟ್ಟಲಾಗುತ್ತಿದೆ. ಈ ಅಣೆಕಟ್ಟು ಸಹ ಪ್ರಾಕೃತಿಕ ಹಾಗೂ ಸಾಮಾಜಿಕ ದೃಷ್ಟಿಗಳಿಂದ ಬಹಳ ದೊಡ್ಡ ಅಪರಾಧವಾಗಿದೆ. ಆದರೆ ಭಾರತ ಸರ್ಕಾರ ಅಭಿವೃದ್ಧಿಯ ಹೆಸರಿನಲ್ಲಿ ಈ ಅಣೆಕಟ್ಟನ್ನು ನಿರ್ಮಿಸುವುದರಲ್ಲಿ ತೊಡಗಿದೆ, ಮಹಾರಾಷ್ಟ್ರದ ಸಾತಾರ ಬಳಿ ಕೊಯನಾ ನದಿಗೆ ಕಟ್ಟಲಾಗಿರುವ ಅಣೆಕಟ್ಟಿನ ಪ್ರದೇಶವು ಸಹ ಆಗಾಗ್ಗೆ ಭೂಕಂಪನಕ್ಕೆ ಒಳಗಾಗುತ್ತಲೇ ಇದೆ.

ಪ್ರಕೃತಿಯಲ್ಲಿ ತನ್ನ ಸಮತೋಲವನ್ನು ಕಾಪಾಡಿಕೊಂಡು ಬರುವ ಸ್ವಭಾವ ಇರುವುದಾಗಿ ಬಲ್ಲವರು ಹೇಳುತ್ತಾರೆ. ಅದು ಕೂಡ ಒಂದು ಮಿತಿಯ ವರೆಗೆ ತನ್ನ ಮೇಲಿನ ಬಲಾತ್ಕಾರವನ್ನು ಸಹಿಸಿಕೊಳ್ಳಬಹುದು. ಅಂಟಾರ್ಕ್ಟಿಕಾ ಹಿಮಗಡ್ಡೆಯು ಭೂಮಿಮೇಲಿನ ಶಾಖದಿಂದ ಕರಗುತ್ತಿದೆ. ಅದರಿಂದ ಸಮುದ್ರದಮಟ್ಟ ಹೆಚ್ಚಾಗಿ ಅದರ ತೀರದಲ್ಲಿಯ ನಗರಗಳು ನೀರುಪಾಲಾಗುವ ಸಂಭವಗಳು ಸ್ಪಷ್ಟವಾಗಿ ಗೋಚರಿಸುತ್ತಿವೆ.

ಒಟ್ಟಾರೆ, ಗುಜರಾತಿನ ಭೂಕಂಪ ಮಾನವನಿಗೆ ಈ ಕೆಳಗಿನ ಸಂಕೇತಗಳನ್ನು ಕೊಟ್ಟಿದೆ:-

೧. ಪ್ರಕೃತಿಯ ಮುಂದೆ ಮಾನವನ ಆಟ ಸಾಗದು; ಆದ್ದರಿಂದ ಅವನ ಅಟಹಾಸ ಸಾಕು.
೨. ಪ್ರಕೃತಿ ತನ್ನ ಮೇಲಿನ ಬಲಾತ್ಕಾರದ ಸೇಡನ್ನು ಒಂದಲ್ಲ ಒಂದು ರೀತಿ ತೀರಿಸಿಕೊಳ್ಳುತ್ತದೆ;
೩. ಮಾನವನು ಪ್ರಕೃತಿಯ ಮೇಲೆ ಯಜಮಾನಿಕೆಯನ್ನು ಸ್ಥಾಪಿಸಲು ಪ್ರಯತ್ನಿಸುವ ಬದಲು ಅದರೊಂದಿಗೆ ಸಹಜೀವನ ಮಾಡಲು ಕಲಿಯಬೇಕು.
೪. ಎಲ್ಲ ಪ್ರಕಾರದ ಪ್ರಕೃತಿ ವಿಕೋಪಗಳ ಬಗೆಗಿನ ಮುನ್ಸೂಚನೆಗಳು ಹೆಚ್ಚು ನಿಖರವಾಗಿ ಗೊತ್ತಾಗವಂಥ ತಂತ್ರಜ್ಞಾನವನ್ನು ಕಂಡುಹಿಡಿಯಬೇಕು.

ಗುಜರಾತ ಭೂಕಂಪವು ಮೂಲತಃ ಲಕ್ಷಾಂತರ ಜನರಿಗೆ ಪ್ರಾಣಹಾನಿ, ಆಸ್ತಿಹಾನಿ ಮುಂತಾದ ಹಾನಿಗಳನ್ನು ತಂದೊಡ್ಡಿದೆ. ಈ ದುರಂತದ ಪರಿಣಾಮ ಇನ್ನೂ ಬಹಳ ದೀರ್ಘಕಾಲ ಉಳಿಯಲಿದೆ, ಆದಾಗ್ಯೂ ಈ ದುರಂತವನ್ನು ಶಾಪವೆಂದು ಪರಿಗಣಿಸದೆ ಮಾನವನು ತನ್ನ ಮುಂದಿನ ಚರಿತ್ರೆಯನ್ನು ಯೋಗ್ಯ ರೀತಿಯಲ್ಲಿ ನಿರ್ಮಿಸಿಕೊಳ್ಳುವ ಬಗ್ಗೆ ಒಂದು ಎಚ್ಚರಿಕೆಯಾಗಿ ಬಂದಿದೆ ಎಂದು

೩೨ನೇ ಪುಟ ನೋಡಿ

ಅಮೇರಿಕೆಯ ಹೊಸ ಅಧ್ಯಕ್ಷರ ಇನ್ನೊಂದು ಮುಖ

– ಪುಣ್ಯಪ್ರಿಯ ದಾಸಗುಪ್ತ

ಈಗ ಅಮೇರಿಕದ ಸಂಯುಕ್ತ ಸಂಸ್ಥಾನಗಳ ಅಧ್ಯಕ್ಷನಾಗಿ ಆಯ್ಕೆ ಆಗಿರುವ ಜಾರ್ಜ್ ವಾಕರ್ ಬುಷ್ ನಾಲ್ಕು ವರ್ಷಗಳ ಒಂದು ಅವಧಿಗೆ ಅಮೇರಿಕೆಯ ಅಧ್ಯಕ್ಷನಾಗಿ ವಾಶಿಂಗಟನ್‌ನಲ್ಲಿಯ ಶ್ವೇತಭವನದಲ್ಲಿ ಪ್ರವೇಶಿಸಬೇಕೆಂದು ಘೋಷಣೆ ಮಾಡಿದಾಗ ನಾವು ಭಾರತೀಯರು ಅವರ ಹೆಸರನ್ನು ಪ್ರಥಮವಾಗಿ ಕೇಳಿದೆವು; ಆಗ ಅವರನ್ನು ಅಲ್ಲಿಯ ಪತ್ರಿಕಾಕರ್ತರು ಭಾರತದ ಪ್ರಧಾನ ಮಂತ್ರಿಯ ಹೆಸರೇನು ಎಂದು ಕೇಳಿದಾಗ ಅದು ತಮಗೆ ಗೊತ್ತಿಲ್ಲವೆಂದು ಹೇಳಿದ್ದರು. ಸ್ವಾಭಾವಿಕವಾಗಿಯೇ ನಾವು ಸಹ ಅವರ ಬಗ್ಗೆ ಆಗ ಹೆಚ್ಚಿಗೆ ತಿಳಿಯಲು ಇಷ್ಟ ಪಟ್ಟಿರಲಿಲ್ಲ. ಆದರೆ ಈಗ ನಾವು ಅವರನ್ನು ಕುರಿತು ಪುನಃ ಆಲೋಚಿಸಲೇ ಬೇಕಾಗಿದೆ. ಏಕೆಂದರೆ ಈಗ ಅವರು ತಮ್ಮ ಮಹತ್ವಾಕಾಂಕ್ಷೆಯನ್ನು ಈಡೇರಿಸಿ ಕೊಂಡಿದ್ದಾರೆ ಮತ್ತು ಅವರೇ ಹೇಳಿಕೊಳ್ಳುವಂತೆ ಪ್ರಪಂಚದಲ್ಲಿಯೇ ಅತ್ಯಂತ ಗರಿಷ್ಟ ಮಟ್ಟದಲ್ಲಿ "ಹಿರಿಯದಾದ ಮತ್ತು ಸ್ವತಂತ್ರವಾದ" ದೇಶದ ಮುಖಂಡ ರಾಗಿದ್ದಾರೆ.

ನಾವು ಮೊಟ್ಟಮೊದಲಬಾರಿಗೆ ಬುಷ್ ಅವರ ಬಗ್ಗೆ ಆಲೋಚಿಸಿದ್ದು ಅಂಥ ತಪ್ಪೇನಲ್ಲ ಎಂಬುದಾಗಿ ಅಲ್ಲಿಯ ಸಾವಿರಾರು ಅಮೇರಿಕನ್ನರು ಹೇಳಿ ಯಾರು. ಕಳೆದವಾರ ಅವರು (ಜನವರಿ ೧೯) ಪ್ರತಿಜ್ಞಾ ಸ್ವೀಕಾರ ವಿಧಿ ಯನ್ನು ನೆರವೇರಿಸುತ್ತಿದ್ದಾಗ ಅವರ ದೇಶದ ಪ್ರಜ್ಞಾವಂತ ನಾಗರೀಕರು ಪ್ರತಿ ಭಟನೆಯಲ್ಲಿ ತೊಡಗಿದ್ದರು. ಆ ಪ್ರತಿಭಟನೆ ಬುಷ್ ಅವರ ಆಯ್ಕೆ ಕಾನೂನಿಗೆ ಅಸಂಗತವಾಗಿ ಆಗಿದೆ ಎಂಬ ವಿಷಯವಾಗಿ ಇತ್ತು. ಉದ್ಘಾಟನಾ ಸಮಾರಂಭದ ಸ್ಥಳದ ಬಹಳ ಹತ್ತಿರದಲ್ಲಿಯೇ ಸಾವಿರಾರು ಅಮೇರಿಕನ್ನರು ಜೋರಾಗಿ ಧಿಕ್ಕಾರ ಎಂದು ಕೂಗಿದರು. "ಕಳ್ಳನಿಗೆ ಸ್ವಾಗತ" ಎಂಬಂಥ ವ್ಯಂಗ್ಯಾರ್ಥ ವುಳ್ಳ ಹಲವಾರು ಫಲಕಗಳನ್ನು ಪ್ರದರ್ಶಿಸಿದರು. ಒಂದು 'ಸಂಯುಕ್ತ ಕ್ರಿಯಾ ಆಂದೋಲನ' ಎಂಬ ಸಂಘಟನೆ ದಿಢೀರನೇ ಹುಟ್ಟಿಕೊಂಡು ಒಂದು ವಾರದ ಮುಂಚಿನಿಂದ ವಾಶಿಂಗಟನ್ ಮತ್ತು ಇತರ ನಗರಗಳಲ್ಲಿ ಪ್ರತಿಭಟನೆಯ ಸಿದ್ಧತೆ ಯಲ್ಲಿ ತೊಡಗಿತ್ತು. ಇಂಥದೇ ಒಂದು ಪ್ರತಿಭಟನೆ ರಿಚರ್ಡ್ ನಿಕ್ಸನ್ ಅಧ್ಯಕ್ಷ ಪದವಿಯನ್ನು ಸ್ವೀಕರಿಸುವ ಸಮಯದಲ್ಲಿ ಆಗಿತ್ತು. ಆಗ ವಿಯಟ್ನಾಂ ಯುದ್ಧದ ಕಾಲ. ಆನಂತರ ಇನ್ನೊಂದು ಬಲಯುತವಾದ ಪ್ರತಿಭಟನೆ ನಡೆ ದದ್ದು ಈಗ ಬುಷ್ ಅಧಿಕಾರ ಸ್ವೀಕರಿಸುವಾಗ. ಸಾಮಾನ್ಯವಾಗಿ ಅಮೇರಿಕನ್

ರಾಜಕೀಯ ಪ್ರತಿಭಟನಾಕಾರರು ಅಂಥ ಉದ್ವೇಗಕ್ಕೆ ಒಳಗಾಗುವುದಿಲ್ಲ. ಆದ್ದರಿಂದ ಅಧ್ಯಕ್ಷರ ಕಾರಿನತ್ತ ಒಂದು ಮೊಟ್ಟೆ, ಒಂದು ಖಾಲಿ ಪ್ಲಾಸ್ಟಿಕ್ ಸೀಸ ಮತ್ತು ನಾಲ್ಕು ಸೇಬು ಹಣ್ಣುಗಳನ್ನು ಎಸೆಯುವಷ್ಟಕ್ಕೆ ಮಾತ್ರ ಪ್ರತಿಭಟನೆ ಸೀಮಿತವಾಗಿತ್ತು; ಕೆಲವರು ಗಾಯಗೊಂಡರು, ಮತ್ತೆ ಕೆಲವರು ಬಂಧಿತ ರಾದರು. ಆದ್ದರಿಂದ ಶಾಂತಿಯುತವಾದ ಅಧಿಕಾರ ಹಸ್ತಾಂತರದ ಅಮೇರಿಕನ್ ಪರಂಪರೆಯ ಬಗ್ಗೆ ಬುಷ್ ಸಂತೋಷಪಟ್ಟದ್ದಕ್ಕೆ ಕಾರಣವಿಲ್ಲದೇ ಇರಲಿಲ್ಲ.

ಇದೇ ಸಮಯದಲ್ಲಿ ಫಿಲಿಫೈನ್ಸ್‌ನಲ್ಲಿ ಅಲ್ಲಿಯ ದೇಶವಾಸಿಗಳು ಮಣಿಲಾ ನಗರದ ಬೀದಿಗಿಳಿದರು ಮತ್ತು ತಮ್ಮ ಪರಮೋಚ್ಚ ಅಧಿಕಾರವನ್ನು ಧೃಢೀ ಕರಿಸಿದರು ಮತ್ತು ಜನಪ್ರಿಯತೆಯನ್ನು ಕಳೆದುಕೊಂಡಿದ್ದ ಜೊಸೆಫ್ ಎಸ್ಟ್ರಾಡಾ ತನ್ನ ಅಧ್ಯಕ್ಷ ಪದವಿಯನ್ನು ಬಿಟ್ಟುಕೊಡುವಂತೆ ಬಲಾತ್ಕರಿಸಿದರು. ಅದೇ ರೀತಿ ಕಾಂಗೋ ಪ್ರಜಾತಾಂತ್ರಿಕ ಗಣರಾಜ್ಯದಲ್ಲಿ ಓರ್ವ ಸೈನ್ಯಾಧಿಕಾರಿಯೊಂದಿಗೆ ನಡೆದ ಘರ್ಷಣೆಯ ಕಾರಣಕ್ಕಾಗಿಯೇ ಅಲ್ಲಿಯ ಅಧ್ಯಕ್ಷ ಲೌರೆಂಟ್ ಕಬಿಲಾ ಅವರನ್ನು ಜನರು ಗುಂಡಿಕ್ಕಿ ಸಾಯಿಸಿದರು. ಒಂದು ವೇಳೆ ಜಾರ್ಜ್ ಬುಷ್‌ರ ಆಯ್ಕೆಯಲ್ಲಾದ ಮೋಸದಂಥ ಘಟನೆ ಬಾಂಗ್ಲಾದೇಶದಲ್ಲಿ ಆಗಿದ್ದರೆ ಅಲ್ಲಿ ವಾರಗಟ್ಟಲೆ ಅಥವಾ ತಿಂಗಳುಗಟ್ಟಲೆ ಇಡೀ ದೇಶದ ಜನಜೀವನವನ್ನೇ ಅಲ್ಲಿಯ ಜನ ಸ್ಥಗಿತಗೊಳಿಸಿಬಿಡುತ್ತಿದ್ದರು. ಅಲ್ಲಿಯ ಬುರಿಗಂಗಾ ಎಂಬ ನದಿಯು ಬಹುಶಃ ರಕ್ತದಿಂದಾಗಿ ಕೆಂಪಾಗುತ್ತಿತ್ತು.

ಆ ಸಂಯುಕ್ತ ಕ್ರಿಯಾ ಅಂದೋಲನಾ ಸಂಘಟನೆ, "ಅಧ್ಯಕ್ಷ ಬುಷ್‌ರ ಆಯ್ಕೆ ಜನತೆಯಿಂದ ಆದುದಲ್ಲ; ಮತ್ತು ಅವರ ಭಂಡತನದ ರಾಜ ಕೀಯವನ್ನು ಅಮೇರಿಕನ್‌ರು ಸಹಿಸುವುದಿಲ್ಲ ಎಂಬ ವಿಚಾರವನ್ನು ಎಲ್ಲೆಡೆ ಪ್ರಚಾರಗೊಳಿಸಬೇಕೆಂಬ ಉದ್ದೇಶ್ಯದಿಂದಲೇ ಸ್ಥಾಪಿತವಾಯಿತು. ಆಗ ಕಾರ್ಮಿ ಕರು, ಪರಿಸರವಾದಿಗಳು, ಮಾನವ ಹಕ್ಕು, ಸಾಮಾಜಿಕ ನ್ಯಾಯ ಮತ್ತು ವಿದ್ಯಾರ್ಥಿಗಳ ಗುಂಪುಗಳ ಜನರು ಒಟ್ಟಿಗೆ ಸೇರಿದರು ಮತ್ತು ಎಲ್ಲರಿಗೂ ಸಮಾನಾದ ವೈರಿ ಬುಷ್ ಮತ್ತು ಅವರು ಪ್ರತಿನಿಧಿಸುತ್ತಿರುವ ವ್ಯವಸ್ಥೆಯ ವಿರುದ್ಧ ಹೋರಾಡಲು ಸಂಘಟಿತರಾದರು. ಮೊಟ್ಟ ಮೊದಲನೆಯ ಆಪಾದನೆ ಏನೆಂದರೆ ಈ ಬುಷ್ ಅಮೇರಿಕ ಸಂಯುಕ್ತ ಸಂಸ್ಥಾನದ ಚುನಾಯಿತ ಪ್ರತಿ ನಿಧಿಯಲ್ಲ; ಇವರು ಅಧಿಕಾರವನ್ನು ಅವೈಧಾನಿಕವಾಗಿ ಕಿತ್ತುಕೊಂಡಿದ್ದಾರೆ ಎಂಬುದು. ನ್ಯಾಯ-ಅನ್ಯಾಯದ ಈ ವಿಷಯದಲ್ಲಿ ಅಮೇರಿಕೆಯ ಬಹುಸಂಖ್ಯಾತ ಜನರು ಈ ಆಂದೋಲನಾ ಸಂಘಟನೆಯ ಪರವಾಗಿರುವಂತೆ ಕಾಣುತ್ತದೆ. 'ವಾಶಿಂಗಟನ್ ಪೋಸ್ಟ್' ಮತ್ತು 'ಎಬಿಸಿ' ಪತ್ರಿಕೆಗಳು ನಡೆಸಿದ ಅಭಿಪ್ರಾಯ

ಸಂಗ್ರಹಣೆಯಲ್ಲಿ ಶೇಕಡಾ ೪೧ ರಷ್ಟು ಜನ ಮಾತ್ರ ಬುಷ್ ಪರ ಇರು ವುದಾಗಿ ತಿಳಿದುಬಂತು.

ಬುಷ್‌ರ ಈ ತಥಾಕಥಿತ ಆಯ್ಕೆ ಅಮೇರಿಕನ್ ರಾಜಕಾರಣದಲ್ಲಿ ದುರ್ವಾಸನೆ ಬೀರುವ ಭ್ರಷ್ಟತೆಯಾಗಿದೆ. ಬಹಳ ದೊಡ್ಡ ಸಂಖ್ಯೆಯ ಜನರ ಮತ ದಾನದ ಹಕ್ಕನ್ನು ಅಸಿಂಧುಗೊಳಿಸಲಾಗಿತ್ತು. ಒಂದಿಲ್ಲ ಒಂದು ಸಬೂಬನ್ನು ಹೇಳಿ ಅಲ್ಲಿಯ ಕರಿವರ್ಣದ ಜನರನ್ನು, ಲಾಟಿನೋಗಳನ್ನು ಮತ್ತು ಇತರ ಬಡ ಬಿಳಿಯರನ್ನು ಮತಗಟ್ಟೆಗಳಿಂದ ದೂರ ಇಡಲಾಯಿತು. ಫ್ಲೋರಿಡಾ ಪ್ರದೇಶದಲ್ಲಂತೂ ಇದು ಅತ್ಯಂತ ಕೀಳುಮಟ್ಟಕ್ಕೆ ಹೋಯಿತು. ಅಂತೆಯೇ ಇತರ ರಾಜ್ಯಗಳಲ್ಲಿ ಕೂಡ. ಇದು ಬುಷ್‌ಗೆ ವಿಜಯವನ್ನು ತಂದುಕೊಡುವಲ್ಲಿ ಸಾಲದಾದಾಗ ಫ್ಲೋರಿಡಾದಲ್ಲಿ ಎಣಿಕೆಯನ್ನು ನಿಲ್ಲಿಸಲಾಯಿತು. ಅಲ್ಲಿ ಬುಷ್‌ರ ನೆಂಟನೊಬ್ಬ ರಾಜ್ಯಪಾಲನಾಗಿದ್ದಾನೆ. ಈ ಚುನಾವಣಾ ಅನ್ಯಾಯ ವನ್ನು ಅಮೇರಿಕೆಯ ಉಚ್ಚ ನ್ಯಾಯಾಲಯವು ರಾಜಕೀಯ ವಿಚಾರಗಳಿಂದ ಪ್ರೇರಿತವಾಗಿ ಬಹಳ ಅಲ್ಪ ಬಹುಮತದಿಂದ ಎತ್ತಿಹಿಡಿಯಿತು. ಪ್ರತಿಸ್ಪರ್ಧಿ ಯಾಗಿದ್ದ ಆಲ್ ಗೋರ್ ಅಷ್ಟು ನೇರವಲ್ಲದ ಕಾನೂನಿನ ಚೌಕಟ್ಟಿನಲ್ಲಿ ಇದರ ವಿರುದ್ಧ ಹೋರಾಡಲೇನೋ ಪ್ರಯತ್ನಿಸಿದರು. ಆದರೆ ಕೊನೆಯಲ್ಲಿ ಅವರು ಅದನ್ನು ಬಿಟ್ಟುಕೊಡಬೇಕಾಯಿತು. ಅವರ ಡೆಮಾಕ್ರಟಿಕ್ ಪಕ್ಷವು ಇದಕ್ಕೂ ಹೆಚ್ಚು ಏನೂ ಮಾಡಲು ಸಿದ್ಧವಿರಲಿಲ್ಲ. ಏಕೆಂದರೆ ಅಮೇರಿಕನ್ ಬಲಿಷ್ಠ ಆಡಳಿತ ವ್ಯವಸ್ಥೆಯು ಗಟ್ಟಿಯಾಗಿಯೇ ಪಕ್ಷಪಾತದ ನಿಲುವನ್ನು ತಳೆದಿದೆ ಯಾದ್ದರಿಂದ ಅದನ್ನು ಅಷ್ಟು ಸುಲಭವಾಗಿ ಎದುರಿಸಲು ಸಾಧ್ಯವಿಲ್ಲ. ಆದಾಗ್ಯೂ ಅಧ್ಯಕ್ಷ ಕ್ಲಿಂಟನ್ ಶ್ವೇತಭವನದಿಂದ ಹೊರ ಹೋಗುವ ಮುನ್ನ ತನ್ನ ಉತ್ತರಾಧಿಕಾರಿಯ ಆಯ್ಕೆ ಅಪಹರಣವಾಗಿದೆಯೆಂದು ಬಹಿರಂಗ ವಾಗಿಯೇ ಹೇಳಿಬಿಟ್ಟರು.

"ಸಂಯುಕ್ತ ಕ್ರಿಯಾ ಆಂದೋಳನ ಸಂಘಟನೆ"ಯ ಪ್ರಕಾರ ಬುಷ್‌ರ ಪೂರ್ವಾಶ್ರಮದ ಚರಿತ್ರೆ ಅಮೇರಿಕೆಗಾಗಲೀ, ಪ್ರಪಂಚಕ್ಕಾಗಲೀ ಶುಭ ದಾಯಕವಾಗಿಲ್ಲ. ಅಮೇರಿಕನ್ನರ ಪ್ರಕಾರ 'ಯಮ ರಾಜ್ಯಪಾಲ' ವಾಶಿಂಗ ಟನ್ನಿಗೆ ಬಂದಿದ್ದಾನೆ. ಟೆಕ್ಸಾಸ್ ರಾಜ್ಯದ ರಾಜ್ಯಪಾಲರಾಗಿದ್ದಾಗ ಬುಷ್ ೧೫೨ ಫಾಸಿಶಿಕ್ಷೆಗಳ ತೀರ್ಪನ್ನು ಕೊಟ್ಟಿದ್ದಾರೆ. ಈ ಸಂಖ್ಯೆ ಗಣರಾಜ್ಯದ ಇತರ ೪೯ ರಾಜ್ಯಗಳ ಒಟ್ಟು ಫಾಸಿಶಿಕ್ಷೆಗಳ ತೀರ್ಪಿಗಿಂತ ಹೆಚ್ಚಾ ಗಿದೆ. ಈ ರೀತಿಯ ಫಾಶಿಶಿಕ್ಷೆಗಳಿಗೂ, ವರ್ಣಭೇದಕ್ಕೂ ಗ್ರಾಹ್ಯವಾಗುವ ಸಂಬಂಧವಿದೆ. ಬುಷ್ ತಮ್ಮ ಕಾನೂನು ಸಲಹೆಗಾರನನ್ನಾಗಿ ಜಾನ್ ಆಶ

ಕ್ರೊಫ್ಟ್ ಎಂಬುವರನ್ನು ನೇಮಕ ಮಾಡಿಕೊಳ್ಳಬಯಸಿದ್ದಾರೆ. ಈ ಆಶ್ರ ಕ್ರೋಫ್ಟ್ ಫಾಸಿಶಿಕ್ಷೆಗೆ ಪರವಾಗಿ ಇರುವಂಥ ಅತಿರೇಕದ ವ್ಯಕ್ತಿ.

ಈ ಹೊಸ ಅಧ್ಯಕ್ಷ ಬುಷ್ ಅವರ ಆಡಳಿತದ ಅವಧಿಯಲ್ಲಿ ಅಮೇರಿಕದ ಪರಿಸರ ಹಾಳಾಗಿಹೋಗುವ ಬಗ್ಗೆ ಸದಾ ಹೆದರಿಕೊಂಡಿರಬೇಕಾಗುತ್ತದೆ. ದೊಡ್ಡ ದೊಡ್ಡ ವಾಣಿಜ್ಯ ಸಂಸ್ಥೆಗಳ ಲಾಭಕ್ಕಾಗಿ ಬುಷ್ ತಮ್ಮ ರಾಜ್ಯ ಟೆಕ್ಸಾಸ್ ಬೇರೆಲ್ಲ ರಾಜ್ಯಗಳಿಗಿಂತ ಅತ್ಯಂತ ಹೆಚ್ಚು ವಾಯುಮಾಲಿನ್ಯವಾಗಿಲುವಂತೆ ಮತ್ತು ಹೆಚ್ಚು ವಿಷಪೂರ್ಣವಾಗಿರುವಂತೆ ಮಾಡಿದ್ದಾರೆ. ರಾಜ್ಯದ ಪ್ರಾಕೃತಿಕ ಸಂಪ ನ್ಮೂಲಗಳನ್ನು ರಕ್ಷಿಸಬೇಕೆಂಬ ಉದ್ದೇಶ್ಯದಿಂದ ತೋರಿಕೆಗಾಗಿ ರಚಿಸಲಾಗಿರುವ ಇಲಾಖಾ ಮುಖ್ಯಸ್ಥರನ್ನಾಗಿ ಪರಿಸರ ವಿನಾಶಮಾಡುವಂಥ ಕೈಗಾರಿಕೋದ್ಯಮಿ ಗಳನ್ನೇ ನೇಮಿಸುವ ಮೂಲಕ ಇದನ್ನು ಸಾಧ್ಯಗೊಳಿಸಲಾಯಿತು. ಅಧ್ಯಕ್ಷ ಬುಷ್ ಅವರು ಈಗ ತಮ್ಮ ಸರಕಾರದಲ್ಲಿ ಆಂತರಿಕ ವ್ಯವಹಾರದ ಕಾರ್ಯ ದರ್ಶಿಯನ್ನಾಗಿ ನೇಮಕ ಮಾಡಿರುವ ವ್ಯಕ್ತಿ ಆರ್ಕಟಿಕ್ ರಾಷ್ಟ್ರೀಯ ವನ್ಯ ಮೃಗ ರಕ್ಷಣಾಧಾಮದಲ್ಲಿ ಎಣ್ಣೆ ಕೊಳವೆ ಬಾವಿಯನ್ನು ಕೊರೆಯಬೇಕೆಂದು ಪ್ರತಿಪಾದಿಸುತ್ತಿದ್ದಾರೆ.

ಬುಷ್ ಮತ್ತು ಅವರ ರಕ್ಷಣಾ ಇಲಾಖಾ ಕಾರ್ಯದರ್ಶಿ ಡೊನಾಲ್ಡ್ ರಮ್‌ಫೀಲ್ಡ್ ಇಬ್ಬರೂ ಸೇರಿ 'ರಾಷ್ಟ್ರೀಯ ಕ್ಷಿಪಣಿ ರಕ್ಷಣಾ ವ್ಯವಸ್ಥೆ' ಎಂಬ ಯೋಜನೆಗೆ ಕಟಿಬದ್ಧರಾಗಿದ್ದಾರೆ. ಈ ಯೋಜನೆಯ ಕಾರಣದಿಂದ ಅಣುಶಸ್ತ್ರಾಸ್ತ್ರ ಯುದ್ಧದಲ್ಲಿ ಮೇಲುಗೈ ಸಾಧಿಸಲು ಅನುಕೂಲವಾಗುತ್ತದೆ. ಈ ಯೋಜನೆ ಗಾಗಿ ಈಗಾಗಲೇ ಪೆಂಟಾಗಾನ್ ನಾಲ್ಕು ಟ್ರಿಲಿಯನ್ ಡಾಲರ್‌ಗಳನ್ನು ಖರ್ಚು ಮಾಡಿದೆ. ಸಂಯುಕ್ತ ರಾಷ್ಟ್ರ ಸಂಘದ ಭದ್ರಾತಾ ಸಮಿತಿಯಲ್ಲಿರುವ ಸದಸ್ಯ ರಾಷ್ಟ್ರಗಳೆಲ್ಲದರ ಒಟ್ಟು ರಕ್ಷಣಾ ಖರ್ಚಿನ ಮೊತ್ತಕ್ಕೂ ಹೆಚ್ಚಿನ ಪ್ರಮಾಣ ದಲ್ಲಿ ಅಮೇರಿಕೆಯ ಮಿಲಿಟರಿ ಬಜೆಟ್ ಇದೆ. ಹಾಗಿರುವಾಗ **'ರಾ.ಕ್ಷಿ.ರ.ವ್ಯ.'** ಪರಿಣಾಮವಾಗಿ ವಿಶ್ವದಲ್ಲೇ ಅತ್ಯಂತ ದೊಡ್ಡ ರಾಷ್ಟ್ರವೊಂದು ಮಿಲಿಟರಿಗಾಗಿ ಇನ್ನೂ ಮಹದ್‌ಪ್ರಮಾದ ಹಣವನ್ನು ಖರ್ಚುಮಾಡಲಿದೆ ಎಂದಾಯಿತು. ಆದರೆ ಅದೇ ರಾಷ್ಟ್ರದ ಸರ್ಕಾರ ತನ್ನ ದೇಶದ ಎಷ್ಟೋ ಪ್ರಜೆಗಳಿಗೆ ಮನೆ, ಆರೋಗ್ಯ ಮತ್ತು ಶಿಕ್ಷಣ ಕೊಡಲು ವಿಫಲವಾಗಿದೆ. ಅಮೇರಿಕಾದ ಎಡಪಂಥೀಯರ ಆಪಾದನೆ ನಿಜವಾಗಿದ್ದಲ್ಲಿ ಬುಷ್ ಪ್ರತಿಜ್ಞೆ ಸ್ವೀಕರಿಸುವ ಸಮಯದಲ್ಲಿ ವಾಶಿಂಗಟನ್‌ನಲ್ಲಿಯ ಪೋಲಿಸರು ರಸ್ತೆಯಲ್ಲಿದ್ದ ನಿರ್ಗತಿಕರನ್ನು ಹೊಡೆದೊಡಿಸಿ ದರು; ಅವರಲ್ಲಿ ನಾಲ್ವರು ಚಳಿಗೆ ಸಿಕ್ಕು ಸತ್ತರು.

ಇಂದು ಅಮೇರಿಕೆಯಲ್ಲಿಯ ಎಲ್ಲ ಸ್ಥಿತಿಗತಿಗಳಿಗೆ ಅಧ್ಯಕ್ಷ ಬುಷ್ ಒಬ್ಬರನ್ನೇ ದೂಷಿಸುವುದು ನ್ಯಾಯುವಲ್ಲವೆಂಬುದು ನಿಜ. ಆದರೆ 'ಸ.ಕ್ರಿ.ಅ.ಸ.'' ದ ಪ್ರಕಾರ ಪ್ರತಿಗಾಮಿ ವಿಚಾರದ ವ್ಯಕ್ತಿ ಅಧ್ಯಕ್ಷನಾಗಿರುವಾಗ ಅಂಥವರ ಆಡಳಿತದಲ್ಲಿ ಯಾವ ಭರವಸೆಯನ್ನೂ ಹೊಂದಲು ಸಾಧ್ಯವಿಲ್ಲವೆಂದು ತರ್ಕ ಮಾಡುತ್ತಿದೆ. ಆದ್ದರಿಂದ ಅವರನ್ನು ವಿರೋಧಿಸಲೇಬೇಕು ಎಂಬುದಾಗಿ ಅದು ಹೇಳುತ್ತಿದೆ. ಬುಷ್ ತಮ್ಮನ್ನು ಕರುಣಾಮಯಿ ಸಂಪ್ರದಾಯಸ್ಥ ಎಂದು ಬಣ್ಣಿಸಿಕೊಂಡಿದ್ದಾರೆ. ಆದರೆ 'ಸಕ್ರಿಅಸ'ದ ಪ್ರಕಾರ ಬುಷ್ ಅವರ ಕರುಣೆ ಬೃಹತ್ ಔಷಧಿ ಉದ್ಯಮಗಳಿಗೆ, ತೈಲ ಉದ್ಯಮಿಗಳಿಗೆ, ಬ್ಯಾಂಕಿಂಗ್ ಮತ್ತು ಇತರ ನಿಗಮಗಳಿಗೆ ಮೀಸಲಾಗಿದೆ.

ಅಮೇರಿಕೆಯ ದೊಡ್ಡ ವಾಣಿಜ್ಯ ಸಂಸ್ಥೆಗಳು ಬುಷ್ ಅವರ ಅಧ್ಯಕ್ಷತೆಯ ಉದ್ಘಾಟನಾ ಕಾರ್ಯಕ್ರಮವನ್ನು ಬಹು ದೊಡ್ಡದಾಗಿಯೇ ಆಚರಿಸಿದವು. ಆ ಸಮಾರಂಭಕ್ಕೆ ಸುಮಾರು ೪೦ ದಶಲಕ್ಷ ಡಾಲರ್‌ಗಳಷ್ಟು ಹಣ ಖರ್ಚಾಯಿತು. ಶ್ರೀಮಂತ ಅಮೇರಿಕನ್ ಪ್ರಜೆಗಳು ಈ ಸಮಾರಂಭದಲ್ಲಿ ಪ್ರವೇಶಪಡೆಯಲು ತಲಾ ಒಂದು ಲಕ್ಷ ಡಾಲರ್ ಕೊಟ್ಟು ಟಿಕೆಟ್ ಪಡೆದರು. ಇವರಲ್ಲಿ ಅನೇಕರು ವಾಹನಗಳ ತಯಾರಿಕಾ ಕಾರ್ಖಾನೆಗಳಿಗೆ ಸಂಬಂಧಿಸಿದ್ದವರಾಗಿದ್ದರು ಮತ್ತು ಇವರು ಇಂಧನದ ಉಳಿತಾಯದ ತಂತ್ರಜ್ಞಾನದ ವಿರುದ್ಧ ಅಭಿಪ್ರಾಯವುಳ್ಳವರಾಗಿದ್ದರು ಮತ್ತು ಇವರಲ್ಲಿ ಇನ್ನೂ ಕೆಲವರು ಸಾರ್ವಜನಿಕ ಭೂಪ್ರದೇಶದಲ್ಲಿ ತೈಲ ಕೊಳವೆ ಬಾವಿ ತೋಡುವ ಇಚ್ಛೆ ಉಳ್ಳವರಾಗಿದ್ದರು ಮತ್ತು ಮೈಕ್ರೋಸಾಫ್ಟ್ ಮತ್ತು ಅಮೇರಿಕನ್ ವಿಮಾನ ಸಂಚಾರದ ಕಂಪನಿಗಳವರಾಗಿದ್ದರು. ಒಟ್ಟಾರೆ, ಹಣದ ಮೂಲಕ ಅಧ್ಯಕ್ಷರನ್ನೂ ಮತ್ತು ಅವರ ನೀತಿಯನ್ನು ನಿರ್ಧರಿಸುವಂಥವರನ್ನೂ ಖರೀದಿಸಬಹುದೆಂಬ ವಿಚಾರವುಳ್ಳವರು ಅಲ್ಲಿ ಪ್ರವೇಶಪಡೆದಿದ್ದರು. ಆದರೆ ಇದೆಲ್ಲ ಲೆಕ್ಕಕ್ಕೆ ಇಲ್ಲದವರಂತೆ ಅಧ್ಯಕ್ಷ ಬುಷ್ ನ್ಯಾಯ ಮತ್ತು ಅವಕಾಶಗಳ ನೆಲೆಯ ಮೇಲೆ ಅಮೇರಿಕವನ್ನು ಏಕರಾಷ್ಟ್ರವನ್ನಾಗಿ ಮಾಡುವುದಾಗಿ ಘೋಷಿಸಿದ್ದಾರೆ. ಆದರೆ ನ್ಯೂಯಾರ್ಕ್ ಟೈಮ್ಸ್ ಅಧ್ಯಕ್ಷರ ಈ ಮಾತಿನಲ್ಲಿ ಆಷಾಢಭೂತನವನ್ನು ಗುರುತಿಸಿದೆ. ★

('ಡೆಕ್ಕನ್ ಹೆರಾಲ್ಡ್' ಸಾಭಾರ)

ಅನು : ಸು ಕೌ,

ಓರ್ವ ಸಾಮಾಜಿಕ ಚಿಂತಕನಾಗಿ ಸಾಹಿತಿ 'ಸುಜನಾ'

–ಸುರೇಂದ್ರ ಕೌಲಗಿ

[ಮೇಲುಕೋಟೆಯಲ್ಲಿರುವ ಕವಿ ಪು.ತಿ.ನ. ಟ್ರಸ್ಟ್ ಆಶ್ರಯದಲ್ಲಿ 17-12-2000 ರಂದು 'ಸುಜನಾ' ಅವರ ನೂತನ ಕಾವ್ಯ ''ಯುಗಸಂಧ್ಯಾ''ದ ನಿಮಿತ್ತವಾಗಿ ಅವರನ್ನು ಸನ್ಮಾನಿಸಿದ ಸಭೆಯಲ್ಲಿ ಮಾಡಲಾದ ಅಧ್ಯಕ್ಷ ಭಾಷಣ. -ಸಂ]

ಸುಜನಾ ಎಂದು ಕಾವ್ಯನಾಮದಿಂದ ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಕೃಷಿ ಮಾಡಿ ಅದನ್ನು ಶ್ರೀಮಂತಗೊಳಿಸಿರುವ ಶ್ರೀ ಸು. ಜ. ನಾರಾಯಣಶೆಟ್ಟರು ಈ ದಿನ ಪೂರ್ತ ನಮ್ಮೆಲ್ಲರ ಮಧ್ಯ ಇದ್ದು ನಮಗೆ ಬಹಳ ಸಂತೋಷವನ್ನುಂಟು ಮಾಡಿದ್ದಾರೆ ಮತ್ತು ಇಂಥ ದೈವೀಕೃಪೆಯ ಸುಮಧುರ ಸಮಾರಂಭಕ್ಕೆ ಕಾರಣರಾಗಿದ್ದಾರೆ. ಸುಜನಾ ಅವರಿಗೆ ಮೇಲುಕೋಟೆ ಹೊಸದಲ್ಲ; ಸಾಕಷ್ಟು ಬಳಕೆಯಾಗಿರುವ ಊರು. ಅವರು ಮೇಲುಕೋಟೆಯನ್ನು ಅರ್ಥ ಮಾಡಿಕೊಂಡಿರುವಷ್ಟು ನಮ್ಮಲ್ಲಿಯ ಅನೇಕರು ಮಾಡಿಕೊಂಡಿಲ್ಲ. ಅವರು ಮೇಲುಕೋಟೆಯ ಬಗ್ಗೆ ಹೊಂದಿರುವ ಒಳತೋಟಿಗಳನ್ನು ನಮ್ಮಲ್ಲಿಯ ಅನೇಕರು ಹೊಂದಿಲ್ಲ. ಅವರು ಇಲ್ಲಿಯ ಸಮಸ್ತವನ್ನೂ ಬಹಳ ಎತ್ತರದ ಅರ್ಥದಲ್ಲಿ ಹಿಡಿದಿಟ್ಟಿದ್ದಾರೆ.

ಇಂದಿನ ಸಮಾರಂಭದ ಪ್ರಸ್ತುತಿಯಾಗಿರುವ ಅವರ ಮಹಾಕೃತಿ 'ಯುಗಸಂಧ್ಯಾ'ದ ತಮ್ಮ ರಚನೆಯ ಸ್ವರೂಪವನ್ನು ಸುಜನಾ ಈ ರೀತಿ ತಿಳಿಸಿದ್ದಾರೆ:- **"ನಮ್ಮೂರ ಯದುಗಿರಿಯ ನಾರಾಯಣ ದೇಗುಲದ ತನ್ಮಯತೆ ತಂದ ನೆಮ್ಮದಿಯೊಳಾದುದೀ ಕೃತಿಯು, ಗುರುಕೃಪಾ ಕೃತಿಯು."** ಇಷ್ಟೊಂದು ಭಾವೈಕ್ಯತೆಯನ್ನೂ, ತಾದ್ಯಾತ್ಮವನ್ನೂ ಮೇಲುಕೋಟೆಯೊಂದಿಗೆ ಹೊಂದಿರುವ ಸುಜನಾ ನಮ್ಮೂರು – ನಿಮ್ಮೂರು ಎಂದೆನ್ನುವ ಲೋಕವ್ಯವಹಾರದ ಮಾತನ್ನು ಸುಳ್ಳಾಗಿಸಿದ್ದಾರೆ. ಯಾವ ಸೃಷ್ಟಿಯೇ ಇರಲಿ ಅದು ಶಿವ ಸೃಷ್ಟಿಯೆಂಬ ದೃಷ್ಟಿಯಿರುವ ಸುಜನಾರಂಥವರು ಮಾತ್ರ ಈ ಮಾತನ್ನು ಸೃಷ್ಟಿಸಬಲ್ಲರು. ಇದಕ್ಕೆಲ್ಲ ಕಳಸಪ್ರಾಯವಾಗಿರುವಂತೆ ಮೇಲುಕೋಟೆಯ ಸುಪುತ್ರನಾಗಿ, ವರಕವಿಯಾಗಿ ಕನ್ನಡ ಸಾಹಿತ್ಯದಲ್ಲಿ ಚಿರಸ್ಥಾಯಿಯಾಗಿರುವ ಶ್ರೀ ಪು.ತಿ.ನ. ಅವರ ಕಾವ್ಯದ ಬೆಸುಗೆಯಲ್ಲಿ ಒಂದಾಗಿದ್ದಾರೆ. ಇದೆಲ್ಲವೂ ಸುಜನಾ ನಮಗೆ ಹತ್ತಿರ, ಬಹಳ ಹತ್ತಿರದ ವ್ಯಕ್ತಿಯಾಗಿ ಪರಿಣಮಿಸಲು ಕಾರಣವಾಗಿದೆ. ಇದಕ್ಕೆಲ್ಲ ಕಾರಣನಾಗಿರುವ "ಶ್ರೀ ವಿಷ್ಣು ವಿಶ್ವಾದಿ ಮೂಲ ಮಾಯಾಲೋಲ,

ದೇವ ಸರ್ವೇಶ ಪರಬೊಮ್ಮನೆಂದು ಜನಂ, ಆವುದನು ಕಾಣದೊಳಮುಳ್ಳಿಯಿಂ ನಂಬಿಹುದೋ ಆ ವಿಚಿತ್ರಕ್ಕೆ ನಮಿಸೋ, ಮಂಕುತಿಮ್ಮ" ಎಂದು ಹೇಳಿ ನಮ್ಮ ಸಂತಸವನ್ನು ಹಂಚಿಕೊಳ್ಳಬೇಕಾಗಿದೆ.

ಸುಜನಾ ಅವರ ಸಾಹಿತ್ಯದ ಹರಹು ವಿಸ್ತಾರವಲ್ಲದಿದ್ದರೂ ಘನ-ಗಾಂಭೀರ್ಯದಿಂದ ಆಳವಾಗಿ ಹರಿಯುವ ಪ್ರವಾಹೋಪಾದಿಯಲ್ಲಿದೆ; ತೀರದಲ್ಲಿ ನಿಂತು ನೋಡುವವರಿಗೂ, ಈಜಿನ ಒರಸೆಗಳನ್ನು ತಿಳಿದವರಿಗೂ ಅದು ಸಂತೋಷವನ್ನುಂಟುಮಾಡುವಂತೆ ಅವರ ಸಾಹಿತ್ಯ ಹೃದ್ಗಮ್ಯವೂ ಮನೋಗಮ್ಯವೂ ಆಗಿದೆ. ಓರ್ವ ಸಾಹಿತ್ಯಪ್ರಿಯನಾಗಿ ಅವರ ಸಾಹಿತ್ಯವನ್ನು ನಾನು ಅನುಭವಿಸಿರುವ ರೀತಿ ಅದು.

ನಾನೊಬ್ಬ ಸಾರ್ವಜನಿಕ ಸೇವಾ ಕಾರ್ಯನಿರತ ವ್ಯಕ್ತಿ. ಮಹಾತ್ಮ ಗಾಂಧೀ, ವಿನೋಬಾ ಭಾವೆ, ಜಯಪ್ರಕಾಶ್ ನಾರಾಯಣರ ವಿಚಾರಗಳಿಂದ ಪ್ರಭಾವಿತನಾಗಿ ಆ ವಿಚಾರಗಳ ಪಡಿನೆರಳಿನಲ್ಲಿ ಕಿಂಚಿತ್ ಸೇವಾಕಾರ್ಯವನ್ನು ಮಾಡಿಕೊಂಡು ಬರುತ್ತಿರುವಂಥ ವ್ಯಕ್ತಿ. ಆದ್ದರಿಂದ ಸಹಜವಾಗಿಯೇ ಸುಜನಾ ಅವರ ಸಾಹಿತ್ಯದಲ್ಲಿ ಸಾರ್ವಜನಿಕ ಚಿಂತನೆ ಅಡಗಿದೆಯೇ, ಇದ್ದಪಕ್ಷದಲ್ಲಿ ಅದರ ಆಯಾಮಗಳೆಂಥವು ಮತ್ತು ಅದರ ಮೊನಚು ಎಷ್ಟು ಎಂಬಂಥ ಅಂಶಗಳನ್ನು ತಿಳಿಯುವ ಕುತೂಹಲ ನನ್ನ ಮನದಲ್ಲಿ ಮೂಡಿತು. ಆ ಕಾರಣದಿಂದ ಅವರ ಸಾಹಿತ್ಯ ಕೃತಿಗಳಲ್ಲಿ ನನಗೆ ದೊರೆತ ಹಲವು ಕೃತಿಗಳನ್ನು ಪರಾಮರ್ಶಿಸಿದೆ. ಅಲ್ಲಿ ನನಗೆ ಅದ್ಭುತವಾದ, ರೋಚಕವಾದ, ಸಮಾನ ಮನಸ್ಕವಾದ ವಿ ಚಾ ರ ಗ ಳು ದೊರೆತವು; ಯಾವ ವಿಚಾರಗಳು, ಭಾವನೆಗಳು, ಪ್ರೇರಣೆಗಳು ನನ್ನನ್ನು ಇದುವರೆಗೆ ಸಾಕಿ ಸಲುಹಿವೆಯೋ ಅವಕ್ಕೆ ಸುಂದರವಾದ, ತರ್ಕಬದ್ಧವಾದ ಮತ್ತು ಸ್ವೀಕಾರಾರ್ಹವಾದ ಶಬ್ದಾಂಬರವನ್ನು ತೊಡಿಸಿ ಅವರು ಅವುಗಳನ್ನು ಸಮಾಜದ ಮುಂದೆ ಇಟ್ಟಿರುವ ಅನುಪಮ ಅನುಭವ ನನಗಾಯಿತು. ಇದಕ್ಕೆ ಉದಾಹರಣೆಯಾಗಿ "ಒಂದೇ ಸೂರಡಿಯಲ್ಲಿ" ಎಂಬ ೧೮೦ ಕವನಗಳ ಸಂಕಲನದಿಂದ "ಗಾಂಧೀಜಿಯ ಕೊಂದ ದಿನ" ಎಂಬ ೧೯೬೭ ನೇ ಇಸವಿಯಲ್ಲಿ ಅಂದರೆ ಮಹಾತ್ಮ ಗಾಂಧೀಜಿಯವರ ಜನ್ಮ ಶತಮಾನೋತ್ಸವದ ವರ್ಷದಲ್ಲಿಯೇ ಮತ್ತು ಅವರು ಜನ್ಮತಳೆದ ತಿಂಗಳಲ್ಲಿಯೇ ಮದ್ಯಪಾನ ನಿಷೇಧವನ್ನು ತೆಗೆದುಹಾಕಿ ಜನರನ್ನು ಮದ್ಯಮತ್ತರನ್ನಾಗಿ ಮಾಡುವ ತೀರ್ಮಾನವನ್ನು ಮೈಸೂರು ಸರ್ಕಾರ ಕೈಗೊಂಡ ಸಂದರ್ಭದಲ್ಲಿ ಅದನ್ನು ಪ್ರತಿಭಟಿಸಿ ಸುಜನಾ ಈ ಕವಿತೆಯನ್ನು ಬರೆದಿದ್ದಾರೆ. ಈ ಕವಿತೆಯಲ್ಲಿ ಸಮಾಜದ ಅತ್ಯಂತ ಹಿಂದುಳಿದ ವರ್ಗದವರ

ಹಿತದೃಷ್ಟಿ ಕವಿ ಮನದಲ್ಲಿ ಎಷ್ಟು ಆಳವಾಗಿ ಬೇರೂರಿದೆಯೆಂಬುದು ಗೊತ್ತಾಗುತ್ತದೆ:-

'ಅಆಇಈ' ವರ್ಣಾಕ್ಷರ ಮಂತ್ರವ ಇದೋ
ಇದೆ ಮೊದಲಿಗೆ ತೊದಲುತ್ತಿಹ ದಲಿತರ ದಟ್ಟದರಿದ್ರರ
ದೀನಾನಾಥ ಶಿಶುಗಳ ಬಿಲಬಾಯಿಗೆ ಹುಳಿಹೆಂಡವ ಸುರಿಸುವ
ಚಿರಪತನ ದಿನ, ಚಿರಪಾಪ ದಿನ.
ಬಳಪ ಹಿಡಿದು ಬಡಮಕ್ಕಳ ಎಳೆಕೈಯಗ್ಗಳಿಗದೋ
ಸಿರಿವಂತರ ಮನೆ ಕಸಪೊರಕೆಯು ಶಾಶ್ವತ
ದೀಕ್ಷೆಯನ್ನಿತ್ತ ತಮಂಧ ದಿನ, ಕಬಂಧ ದಿನ
ಶಿಕ್ಷಿತ ಉತ್ತಮರಹಮಿಕೆಯನ್ನೂ
ಆಳರಸರ ದಬ್ಬಾಳಿಕೆಯನ್ನೂ
ಕುಟಿಲರ ಕಪಟವ್ಯೂಹಗಳನ್ನೂ
ಹೂಡಿಗೂಡಿಲ್ಲೆನ್ನುವ, ಲೋಕಕ್ಕೆ ಸಾರುವ ನತದೃಷ್ಟದಿನ, ಗತದೃಷ್ಟಿದಿನ
ಶಿಕ್ಷಿತ ಭೋಗೋದ್ದೃಪ್ತರ ಕಸಿ ಸೃಷ್ಟಿಸುವ
ಅನಿಯಂತ್ರಿತ ಜನತಂತ್ರದ ಸ್ವಾಸ್ಥ್ಯವ ತಪ್ಪಿಸುವ,
ಯಮಸಂಯಮ ನಿಯಮ ವಿಹೀನರ ಮತ್ತರ ಕೈಯ್ಯೊಳ್
ರಾಷ್ಟ್ರೋದ್ಧಾರವನೊಪ್ಪಿಸುವ ವಿಷಾದ ದಿನ ವಿಕೃತವಿಲಾಸದಿನ.

ಕವನದ ಈ ಸಾಲುಗಳನ್ನು ಓದಿದ ಕೂಡಲೇ ಸುಜನಾರಲ್ಲಿ ನಾನು ಗಾಂಧೀಪಥದ ಪಥಿಕನೊಬ್ಬನನ್ನು ಕಂಡೆ ಮತ್ತು ಪಡೆದೆ. ಹಾಗಾಗಿ ಅವರ ಇತರೆ ಎಲ್ಲ ಕವನಗಳಲ್ಲಿಯು ಮತ್ತು ಲೇಖನಗಳಲ್ಲಿಯು ಪ್ರಕೃತಿ, ಪ್ರಾಣಿಸಂಕುಲ ಮತ್ತು ಮಾನವ ಸಮಾಜದವರೆಲ್ಲರ ಉದಯವನ್ನು ಬಯಸುವ ಸರ್ವೋದಯ ವಿಚಾರದ ಹರಿಕಾರನನ್ನು ದರ್ಶಿಸಿದೆ. ಸುಜನಾ ಅತ್ಯಂತ ಪರಿಸರ ಪ್ರಿಯರು. ಅವರ ಪರಿಸರ ಪ್ರೇಮದ ಒಂದು ಚಿಕ್ಕ ಉದಾಹರಣೆ:-

ಮೊನ್ನೆ ಹೊಸದಾಗಿ ನಮ್ಮೂರಿನಲಿ ದೊಡ್ಡ ಸಾಮಿಲ್ಲ
ಚಾಲನೆ ನಡೆಸಿ ಪರಸಿ ಉದ್ಘಾಟಿಸಿದರಣ್ಣ ಮಂತ್ರಿ
ಅಂದಿನಿಂದೇಕೋ ಮೃಗಪಕ್ಷಿ ಲೋಕದಲಿ ಕೋಲಾಹಲ
ಕಾಡಮರಕ್ಕೆಲ್ಲ ದುಃಸ್ವಪ್ನ, ನಿದ್ರಾಭಂಗ ಕಾಲುನಡುಕ.

ಈ ನಾಲ್ಕು ಸಾಲುಗಳ ಪದ್ಯದಲ್ಲಿ ನಮಗೆ ಏಕಕಾಲಕ್ಕೆ ತಾಂತ್ರಿಕತೆಯ ದುರುಪಯೋಗ, ಮನುಷ್ಯನ ಹಣದ ದಾಹ, ಮಂತ್ರಿಗಳ ನೀತಿರಹಿತ ವರ್ತನೆ

ಮತ್ತು ಪ್ರಕೃತಿಯ ನಿಃಸಹಾಯಕತೆಯೆಲ್ಲ ಕಣ್ಣಮುಂದೆ ಬಂದು ನಿಲ್ಲುತ್ತವೆ.

"ಈ ಅಮಿತ ಸೃಷ್ಟಿಸಂಪದವೆಲ್ಲ ವಿಷಯಕರಣಾಕಾಮಿಗಳ ಭೋಗಕ್ಕೆಂದೇ ಸೃಷ್ಟಿಗೊಳ್ಳಲಿಲ್ಲ" ಎಂದು ಹೇಳಿರುವ ಅವರ ಪರಿಸರ ಪ್ರಿಯತೆ ಕೇವಲ ಸುತ್ತಲಿನ ಭೌತಿಕ ಪ್ರಕೃತಿಗೆ ಮಾತ್ರ ಸೀಮಿತವಲ್ಲ, ಅದು ಪ್ರಾದೇಶಿಕ ಭಾಷೆ ಯನ್ನೂ ಒಳಗೊಂಡಿರುತ್ತದೆ.

"ಸಮುದ್ರದಿಂದಾಗುವ ಭೂಸವೆತವನ್ನು ಶೀಘ್ರವೇ ತಪ್ಪಿಸದಿದ್ದರೆ ಆ ಭಾಗದ ಊರುಗಳು, ನಗರಗಳು ಹೆಚ್ಚು ಹೆಚ್ಚು ನೀರು ಪಾಲಾಗುವಂತೆ ಶುದ್ಧ ಕನ್ನಡದ ಭೂ ವಲಯವು ಕುಗ್ಗುತ್ತಾ ಹೋಗುತ್ತಿದೆ. ಒಟ್ಟಾರೆ ಕನ್ನಡ ನಿಘಂಟುವಿನ ಗಾತ್ರ ಅನ್ಯಭಾಷಾ ಪದಗಳಿಂದ ಹಿಗ್ಗಿದರೂ ಶುದ್ಧ ಕನ್ನಡ ಸತ್ವ ಕ್ಷೀಣಿಸುತ್ತಾ ಹೋಗುತ್ತಿದೆ. ಈ ಅಪಾಯವನ್ನು ತಡೆಯಬೇಕು" ಎಂದು ಸುಜನಾ ಎಚ್ಚರಿಕೆ ಕೊಟ್ಟಿದ್ದಾರೆ. ಅವರ ಈ ಮಾತಿನಲ್ಲಿ ಕನ್ನಡದ ಬೆಳವಣಿ ಗೆಯ ರೀತಿ ಹೇಗೆ ಇರಬೇಕೆಂಬುದು ಸ್ಪಷ್ಟವಾಗಿ ಗೋಚರಿಸುತ್ತದೆ. ಇದ ರೊಂದಿಗೆ ಸುಜನಾರವರು ಆಧುನಿಕ ಅಭಿವೃದ್ಧಿಯ ನಮ್ಮ ಅನುಕರಣೆ ಕುರಿತು ಹೇಳುವ ಅವರ ಮಾತುಗಳು ಸಹ ಇಂದಿನ ಅನೇಕರ ಭಾವನೆ ಗಳಿಗೆ ಧ್ವನಿಯನ್ನು ತಂದುಕೊಟ್ಟಿದೆ. ಕೇವಲ ನಾಲ್ಕು ಸಾಲುಗಳ ಈ ಪಂಕ್ತಿ ಅಂಥದಕ್ಕೊಂದು ಉದಾಹಣೆಯಾಗಿದೆ:–

ಓಡುವ ಲಾರಿ ಮೋಟಾರ್‌ಗಳ ಪೃಷ್ಠಕ್ಕೆ ತೆಕ್ಕೆ ಬಿಗಿದು
ವೇಗ ವರ್ಧಿಸಿಕೊಳ್ಳುವ ಹುಡುಗು ಸೈಕಲ್ ಸವಾರರು ನಾವು;
ನಮಗಿಲ್ಲ. ನಮ್ಮ ಗತಿ, ತಿಳಿದಿಲ್ಲ ನಮ್ಮ ವಾಹನದ ವೇಗಧಾರಣ ಮಿತಿ.
ಅಭಿವೃದ್ಧಿ ರಾಷ್ಟ್ರಗಳ ಬೆನ್ನ ಕಚ್ಚಿರುವ ನಮಗೆ ಕಡೆಗೆಲ್ಲಿ ಮುಕುತಿ ?

ಸುಜನಾರವರ ಸಾಹಿತ್ಯದ ಮೇಲೆ ಪ್ರಸ್ತುತ ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯ ಬೆಳವಣಿಗೆಗಳ ಪ್ರಭಾವ ಉಂಟಾಗತ್ತಲೇ ಇರುತ್ತದೆಂಬ ಅನಿಸಿಕೆ ನನಗೆ ಉಂಟಾಗಿದೆ. ಅವರು ಇಂಥ ವಿಷಯಗಳ ಬಗ್ಗೆ ಬಹಳ ತೆರೆದ ಮನಸ್ಸಿನವರಾಗಿದ್ದಾರೆ. ಹಿರಿಯ ಕವಿಯಾಗಬೇಕಾದರೆ "ತನ್ನ ನಾಡಿನ ದರ್ಶನ, ಜೀವನ, ಪರಂಪರೆಯನ್ನು ಕಂಡುಂಡಿಲ್ಲದ ಯಾರೂ, ತನ್ನ ನುಡಿಯ ನಿರಂತರ ಪರಂಪರೆಯನ್ನರಿತಿಲ್ಲದ ಯಾರೂ ಹಿರಿಯ ಕವಿಯಾಗಲಾರ" ಎಂದು ಸ್ಪಷ್ಟವಾಗಿ ಹೇಳಿದ್ದಾರೆ. ಈ ಮಾತಿನ ಹೊಂಬೆಳಕಿನಲ್ಲಿಯೇ ಕುವೆಂಪು ಅವರ ಸಾಹಿತ್ಯ ಪರಿಚಯಿಸುವ ಸುಜನಾ ಸ್ವತಃ ಆ ಮಾತನ್ನು ತಮ್ಮ ಸಾಹಿತ್ಯ ಕೃಷಿಯುದ್ದಕ್ಕೂ ಹೇಗೆ ಉಳಿಸಿಕೊಂಡು ಬಂದಿದ್ದಾರೆ ಎಂಬುದಕ್ಕೆ ಅವರ ಬಹಳ

ನೂತನ ಕೃತಿಯಾದ "ಯುಗ ಸಂಧ್ಯಾ"ದ ರಚನೆಯ ಕಾಲಕ್ಕೆ ಅವರು ಹೊಂದಿದ್ದ ಮನೋಧರ್ಮವು ಇದಕ್ಕೆ ಸಾಕ್ಷಿಯಾಗಿದೆ. ಯುದ್ಧೋತ್ತರ ಭಾರತ ಕಥೆಯನ್ನು ಹೇಳುವಾಗ ಸುಜನಾರ ಮನಸ್ಸಿನಲ್ಲಿ ಆಧುನಿಕ ಭಾರತದ ಸ್ವಾತಂತ್ರ್ಯೋತ್ತರದ ಘಟನೆಗಳು, ಮುಖ್ಯವಾಗಿ ದೇಶವನ್ನು ಒಡೆಯಲು ಕಾರಣರಾದ ಎಲ್ಲರನ್ನೂ ಮನಸ್ಸಿನಲ್ಲಿಟ್ಟುಕೊಂಡಿರುವಂತೆ ತೀವ್ರವಾಗಿ ಭಾಸವಾಗುತ್ತದೆ. ಇದು ನಮಗೆ "ಯುಗ ಸಂಧ್ಯಾ"ದ ಅವರು ಹೇಳಿರುವ ಪೀಠಿಕೆಯಲ್ಲೇ ಹೃದ್ಗೋಚರವಾಗುತ್ತದೆ. ಸುಜನಾ ಹೇಳುತ್ತಾರೆ, "ಮಹಾಯುದ್ಧದ ನಂತರ ಭಾರತ ಕಥೆ ಪಾಂಡವರ ಗೆಲುವಿನಿಂದ ಪ್ರಾರಂಭವಾಗುತ್ತದೆಯಾದರೂ ಆ ಗೆಲುವಿನ ನಲವು ಅಮಿಶ್ರಿತವಾಗಿರಲಿಲ್ಲ. ಸಾವಿನ ಬೇಗೆಯು ಗೆದ್ದವರನ್ನೂ ಸಮಾನವಾಗಿ ತೆಕ್ಕೆಗೊಂಡಿತ್ತು. ಹೀಗಿಲಾಗಿ, ಗೆದ್ದವು ಸೋತು-ಸತ್ತವರ ಬಂಧುಗಳ ಜೊತೆಯಲ್ಲೇ ಒಡಬಾಳಬೇಕಾಗಿತ್ತು. ತನಿಯಾಗಿ ತಮ್ಮ ಅನುಭವವನ್ನು ಬಾಳಲಾರದೆ ಉಭಯರೂ ಬಳಲುತ್ತಾರೆ. ತವರಿನಲ್ಲೇ ಪರಕೀಯತೆಯನ್ನು ಬಾಳಬೇಕಾಗುತ್ತದೆ. ಹೊಸ ಪರಿಸರದಲ್ಲಿ ಹಳೆಯ ಭಾವನೆಗಳು ಹೊಸನೆಲೆಯನ್ನು ಕಂಡುಕೊಳ್ಳಲಾಗದೇ, ಹಳೆಯ ನೆಲೆಯನ್ನು ಬಿಡಲಾಗದೇ ತೊಳಲುತ್ತವೆ. ಗೆಲ್ಲುವ ಬಯಕೆಯ ಉತ್ಕಟತೆಯಲ್ಲಿ ಕಾಣಲಾಗದಿದ್ದ ಧರ್ಮಾಧರ್ಮದ ನೆಲೆ ಬೆಲೆಗಳು ವಿಜಯಾನಂತರದ ಘಳಿಗೆಯಲ್ಲಿ ತಮ್ಮ ಸಹಜ ವರ್ಣವನ್ನು ಕಂಡುಕೊಳ್ಳತೊಡಗುತ್ತವೆ. ವಿಪುಲಕ್ರಿಯೆಯಿಂದ ತುಂಬಿರದ ಯುದ್ಧೋತ್ತರ ದಿನದ ಜನರ ಮನಸ್ಸನ್ನು ಹಳೆಯ ಅನುಭವಗಳೇ ಹೆಚ್ಚು ಕಾಡುವುದು ಸಹಜ. ಸೋತು ಅಸಹಾಯರಾದವರಲ್ಲಿ ಅದು ಮತ್ತೂ ಅಧಿಕ. ಅರಗದ ಅನುಭವಗಳನ್ನು ಮೆಲುಕುತ್ತಾ ಅರಗಿಸಿಕೊಳ್ಳುವ ಕ್ರಿಯೆಯಲ್ಲಿ ಅವರು ತೊಡಗುತ್ತಾರೆ." ಸುಜನಾರವರ ಈ ಮಾತುಗಳು ಭಾರತ ಮತ್ತು ಪಾಕಿಸ್ತಾನ ದೇಶಗಳೆರಡರ ಜನಪದದ ಇಂದಿನ ಮನೋಸ್ಥಿತಿಗೆ ಬಹಳಷ್ಟು ಸಾಮ್ಯವಾಗುತ್ತದೆ.

ಈ ಮಾತುಗಳನ್ನು ಹೇಳುವಾಗ ನನಗೆ ಆಚಾರ್ಯ ವಿನೋಬಾ ಅವರು ಸರ್ವೋತ್ತಮ ಸಾಹಿತ್ಯದ ಲಕ್ಷಣವೇನು ಎಂಬ ಬಗ್ಗೆ ಹೇಳಿದ ವ್ಯಾಖ್ಯೆ ನೆನಪಾಗುತ್ತದೆ. ಅವರ ಪ್ರಕಾರ ಸಾಹಿತ್ಯದಲ್ಲಿ ವ್ಯಂಜನಗಳಿವೆ, ಲಕ್ಷಣಗಳಿವೆ ಮತ್ತು ಸೂಚನೆಗಳಿವೆ. ಇದೇ ಸಾಹಿತ್ಯದ ಒಂದು ವಿಶೇಷತೆ, ಈ ವಿಶೇಷತೆ ಆಜ್ಞೆ ಕೊಡುವುದರಲ್ಲಾಗಲೀ, ಸಾಕ್ಷಾತ್ ಉಪದೇಶ ಕೊಡುವುದರಲ್ಲಾಗಲೀ ಇಲ್ಲ. ಸಾಕ್ಷಾತ್ ಉಪದೇಶ ಇರುವ ಕಡೆಗೆ ಪರಿಣಾಮ ಇರುವುದಿಲ್ಲ. ಎಲ್ಲಿ

೨೭ನೇ ಪುಟ ನೋಡಿ

ಸದಾಚಾರ ವಿಧಾಯಿನೀ

–ಬಾಬುರಾಮಚಂದ್ರ ಶರ್ಮ
ಭಾಷಾಂತರ ಮತ್ತು ಟಿಪ್ಪಣಿ :–ಉಮಾಕಾಂತ ಭಟ್ಟ

[ಬಾಬು ರಾಮಚಂದ್ರಶರ್ಮ ಬಹಳ ಉಪಯುಕ್ತರ ಕೆಲಸ ಮಾಡಿದ್ದಾರೆ. ಸದಾಚಾರವೇ ಮನುಷ್ಯನನ್ನು ಸಂಸಾರಸಾಗರದಲ್ಲಿ ತೇಲಿಸುತ್ತದೆ. ಅಂಥ ಸದಾಚಾರಗಳನ್ನು ಒಂದೊಂದೇ ವಾಕ್ಯದಲ್ಲಿ ಬರೆದಿದ್ದಾರೆ. ಅದರ ಕನ್ನಡ ಅನುವಾದ ಟಿಪ್ಪಣಿ ಸಹಿತ ಇಲ್ಲಿ ಪ್ರಸ್ತುತಗೊಂಡಿದೆ. -ಸಂ]

೧. ಕಲ್ಯಾಣ ಕರ್ಮ ಕುರ್ಯಾತ್ ।

ಶ್ರೇಯಸ್ಕರವಾದ ಕಾರ್ಯವನ್ನು ಮಾಡಬೇಕು.

ಮನುಷ್ಯ ಹುಟ್ಟಿದಂದಿನಿಂದ ಸಾಯುವ ವರೆಗೆ ಯಾವುದಾದರೊಂದು ಕೆಲಸವನ್ನು ಮಾಡುತ್ತಲೇ ಇರುತ್ತಾನೆ. ಯಾವ ಕಾರ್ಯವನ್ನೂ ಮಾಡದೆ ಅವನು ಕ್ಷಣಮಾತ್ರವೂ ಇರಲಾರ. ಹೀಗೆ ಕಾರ್ಯಪ್ರವೃತ್ತಿಯು ಸಹಜವೆಂದಮೇಲೆ ಒಳ್ಳೆಯ ಕೆಲಸವನ್ನು ಮಾಡುವುದೇ ಉಚಿತ. ಇದೇ ವಿವೇಕಿಗಳ ಹಾದಿ. ಕೆಟ್ಟ ಕೆಲಸದ ಫಲ ಕೆಡುಕು, ಒಳ್ಳೆಯ ಕೆಲಸದ ಫಲ ಒಳಿತು.

ಸಮಾಜದ ಹಾಗೂ ವ್ಯಕ್ತಿಯ ಹಿತವನ್ನು ರಕ್ಷಿಸುವ ಕಾರ್ಯಗಳು ಶುಭಕಾರ್ಯಗಳು. ಬಾವಿ-ಕೆರೆ-ಕಾಲುವೆಗಳನ್ನು ತೋಡಿಸುವುದು, ಹಣ್ಣಿನ ಮರಗಳ ತೋಪುಗಳನ್ನು ನೆಡಿಸುವುದು, ರಸ್ತೆಗಳನ್ನು ನಿರ್ಮಿಸುವುದು, ಗ್ರಾಮ-ನಗರಗಳ ನೈರ್ಮಲ್ಯವನ್ನು ಕಾಪಾಡುವುದು, ಶಿಕ್ಷಣದಿಂದ ಪ್ರಜೆಗಳಲ್ಲಿ ವಿವೇಕವನ್ನು ಜಾಗತೀಕರಿಸುವುದು – ಇವೇ ಮೊದಲಾದವು ಸಮಾಜದ ಹಿತವನ್ನು ಸಾಧಿಸುವ ಕಾಯಕಗಳು. ಇವುಗಳಿಗೆ ಇಷ್ಟಾಪೂರ್ತಗಳೆಂದು ಹೆಸರು. ಇಂಥ ಕಾರ್ಯಗಳನ್ನು ವೈಯಕ್ತಿಕವಾಗಿ ಅಥವಾ ಹಲವರು ಗುಂಪಾಗಿ ನೆರವೇರಿಸಬೇಕು. ಇದರಿಂದ ದೇಶಕ್ಕೆ ಕ್ಷೇಮ. ವ್ಯಕ್ತಿ ತನ್ನ ವೈಯಕ್ತಿಕ ಅಭ್ಯುದಯಕ್ಕಾಗಿ ಆಚರಿಸುವ ಅಧ್ಯಯನ, ತಪಸ್ಸು, ಧ್ಯಾನ, ದಾನ, ಜಪ-ಹೋಮಾದಿಗಳೂ ಶ್ರೇಯಸ್ಕರ ಕಾರ್ಯಗಳೇ. ಇಂಥ ಎಲ್ಲ ಕಾರ್ಯಗಳ ಪ್ರಯೋಜನ ಸಮಾಜ ಮತ್ತು ವ್ಯಕ್ತಿಗಳ ಕಲ್ಯಾಣ.

೨. ಪ್ರಾಗುದಯಾತ್ ಪ್ರಬುಧ್ಯೇತ ।

ಸೂರ್ಯೋದಯಕ್ಕೆ ಮೊದಲು ಏಳಬೇಕು.

'ಬೇಗ ಮಲಗಿ ಬೇಗ ಏಳು' ಎನ್ನುವುದು ಆರೋಗ್ಯದ ಮೂಲಸೂತ್ರಗಳಲ್ಲೊಂದು; ಸೂರ್ಯೋದಯಕ್ಕೆ ಸ್ವಲ್ಪ ಮೊದಲು ಅರುಣೋದಯ.

ಆಕಾಶದಲ್ಲಿ ನಕ್ಷತ್ರಗಳು ಮಾಯವಾಗತೊಡಗಿ ಪೂರ್ವದಿಕ್ಕಿನಲ್ಲಿ ಕೆಂಪು ಹರಡುವ ಕಾಲವದು. ಆಗ ಹಾಸಿಗೆಯಿಂದ ಎದ್ದು ನಮ್ಮ ಅಂದಂದಿನ ಚಟುವಟಿಕೆಗಳಿಗೆ ಅಣಿಯಾಗುವುದು ಆರೋಗ್ಯಕ್ಕೆ ಹಿತಕರ. ಮನಸ್ಸಿಗೆ ಆಹ್ಲಾದಕರ. ಮುಂಜಾವಿನಲ್ಲಿ ಏಳುವುದರಿಂದ ಮನಸ್ಸು ಹಗುರವಾಗಿರುವುದು. ಮೈ ಲಘುವಾಗಿದ್ದು ಆಲಸ್ಯಕ್ಕೆ ಎಡೆಯಿರಲಾರದು. ಪ್ರಾತಃಕಾಲದ ವಾತಾವರಣ ಅತ್ಯಂತ ಸ್ಫೂರ್ತಿದಾಯಕ.

ಆದ್ದರಿಂದ ಸೂರ್ಯೋದಯಕ್ಕೆ ಮೊದಲು ಎಚ್ಚರಗೊಳ್ಳುವ ಅಭ್ಯಾಸವನ್ನು ಬೆಳೆಸಿಕೊಳ್ಳಬೇಕು.

೩. ಭಗವಂತಮ್ ಅಭಿಧ್ಯಾಯೀತ ।

ಪರಮಾತ್ಮನನ್ನು ಚನ್ನಾಗಿ ಧ್ಯಾನಿಸಬೇಕು.

ಪರಮಾತ್ಮ ಸಮಸ್ತ ಪ್ರಪಂಚದ ಪ್ರಭು. ಸೃಷ್ಟಿ, ಸ್ಥಿತಿ, ಲಯಗಳು ಇವನ ಲೀಲೆಗಳು. ಎಲ್ಲವೂ ಇವನ ಸಂಕಲ್ಪಾಧೀನ. ಇವನ ಇಚ್ಛೆಯಿಲ್ಲದೆ ಹುಲ್ಲುಕಡ್ಡಿಯೂ ಅಲ್ಲಾಡದು. ಹಸುಗಳು ಹಾಲು ಕರೆಯುವುದು, ಗಿಡ–ಮರ–ಬಳ್ಳಿಗಳು ಹೂ–ಹಣ್ಣು ಬಿಡುವುದು, ಕಾಲಕಾಲಕ್ಕೆ ಮಳೆಯಾಗುವುದು, ಖಗೋಲ–ಭೂಗೋಲಗಳು ನಿರಂತರವಾಗಿ ಚಲಿಸುವುದು - ಹೀಗೆ ಸೃಷ್ಟಿಯ ಎಲ್ಲ ಪ್ರಕ್ರಿಯೆಗಳು ಇವನ ಪ್ರೀತಿ–ಅಪ್ರೀತಿಗಳಿಂದ ಪ್ರೇರಿತವಾದಂತಹವು. ಅಂದ ಮೇಲೆ ಭಗವಂತನ ಮಕ್ಕಳಾದ ನಾವು ಇವನಿಗೆ ಅಧೀನರು – ವಿಧೇಯರು ಎಂಬ ಅಂಶ ಅತ್ಯಂತ ಸ್ಪಷ್ಟ.

ಸಂಸಾರ ವೃಕ್ಷಕ್ಕೆ ಭಗವಂತನೇ ಬೀಜ – ಮೂಲಕಾರಣ. ಇವನಿಂದ ಪ್ರಪಂಚ ಹುಟ್ಟಿ ಬೆಳೆದಿದೆ. ಬಂಗಾರದಿಂದ ನಾನಾ ಆಭರಣಗಳು ರೂಪುಗೊಂಡಂತೆ ಇವನಿಂದ ವಿವಿಧವೂ ವಿಚಿತ್ರವೂ ಆದ ಈ ಜಗತ್ತು ರೂಪುಗೊಂಡು ವಿಸ್ತರಿಸಲ್ಪಟ್ಟಿದೆ. ಬಂಗಾರದ ಪರಿಚಯವಿದ್ದವನಿಗೆ ಆಭರಣಗಳ ಪರೀಕ್ಷೆ ಸುಲಭವಷ್ಟೆ! ಇದರಂತೆ ಪರಮಾತ್ಮನನ್ನು ಚಿಂತಿಸಿ ಅರಿತವನಿಗೆ ಲೋಕವಿಜ್ಞಾನ ಬಲು ಸುಲಭ. ಅದಕ್ಕಾಗಿಯೇ ಜಗತ್ಕಾರಣನಾದ ಆ ಪ್ರಭುವನ್ನು ಧ್ಯಾನಿಸಬೇಕು.

ಧ್ಯಾನ ಒಂದು ವಸ್ತುವಿನ ನಿರಂತರ ಚಿಂತನೆ. ಸಾಧಕನ ಏಕಾಗ್ರ ಮನಸ್ಸು ಮಾತ್ರ ಇದನ್ನು ಸಾಧಿಸಬಲ್ಲುದು. ಇದಕ್ಕೆ ಅವನ ಸೋಲರಿಯದ ಪ್ರಯತ್ನ ಮತ್ತು ಅವನಿಗೆ ಒಲಿದೊದಗುವ ಭಗವದನುಗ್ರಹಗಳು ಬೇಕೇ ಬೇಕು. ಇಂಥ ಸಜ್ಜುಗೊಂಡ ಧ್ಯಾನಕ್ಕೆ 'ಯೋಗ' ಎಂದು ಹೆಸರು. ಯಾವ ವಸ್ತುವನ್ನು ತಿಳಿದರೆ ಎಲ್ಲವನ್ನೂ ಪಡೆದಂತಾಗುವುದೋ, ಯಾವ ವಸ್ತುವನ್ನು ಪಡೆ

ದರೆ ಎಲ್ಲವನ್ನೂ ತಿಳಿದಂತಾಗುವುದೋ ಅಂಥ ವಸ್ತುವೇ ನಿರಂತರ ಚಿಂತನೆಗೆ ಯೋಗ್ಯ. ಆ ವಸ್ತು ಪರಮಾತ್ಮನಲ್ಲದೇ ಮತ್ತಾವುದು? ಆದುದರಿಂದ ಸಂಧ್ಯಾ ಕಾಲಗಳಲ್ಲಿ, ಪರ್ವದಿನಗಳಲ್ಲಿ, ಒಳ್ಳೆಯ ಘಳಿಗೆಗಳಲ್ಲಿ ಸದಾ ಭಗವಂತನನ್ನು ತಪ್ಪದೆ ಧ್ಯಾನಿಸಬೇಕು.

೪. ತದ್ಗುಣಾನ್ ಸ್ಮರೇತ್ ।

ಭಗವಂತನ ಗುಣಗಳನ್ನು ಚಿಂತಿಸಬೇಕು.

ಹಿರಿದಾದ ವಸ್ತುವಿನ ಸ್ಮರಣೆ ನಮ್ಮನ್ನು ಹಿರಿದು ಮಾಡುತ್ತದೆ. ಅದರ ಒಡನಾಟವಂತೂ ಅತ್ಯಂತ ಉಪಕಾರಿ. ಈ ಲೋಕದಲ್ಲಿ ಎಲ್ಲಕ್ಕಿಂತಲೂ ಹಿರಿಯ-ಹಿರಿದು ಭಗವಂತ. ಇವನ ವಿಭೂರೂಪದ ಎದುರು ಎಲ್ಲರೂ, ಎಲ್ಲವೂ ಕುಬ್ಜವೇ. ಇವನು ಸರ್ವಜ್ಞ. ಸರ್ವದೋಷಲೇಶಕ್ಕೂ ಅವಕಾಶವಿಲ್ಲ. ಅಖಂಡವಾದ ಜ್ಞಾನ, ಶಕ್ತಿ, ವೈರಾಗ್ಯ, ಐಶ್ವರ್ಯ, ವೀರ್ಯ, ತೇಜಸ್ಸು, ಈ ಆರು ಗುಣಗಳಿಗೆ 'ಭಗ' ಎಂದು ಹೆಸರು. 'ಭಗ'ವುಳ್ಳವನು ಭಗವಂತ.

ಭಗವಂತನ ಕಲ್ಯಾಣಗುಣಗಳನ್ನು ಸ್ಮರಿಸುವುದರಿಂದ ನಾವು ಅವನ ಪ್ರೀತಿಯನ್ನು ಗಳಿಸುತ್ತೇವೆ. ಅವುಗಳ ಸ್ಮೃತಿ ನಮ್ಮಲ್ಲಿ ಹೊಸ ವಿಕಾಸವನ್ನುಂಟು ಮಾಡುತ್ತದೆ. ಅವನ ಗುಣಗಳಲ್ಲಿ ಅನುಕರಿಸಿದರೂ ಸಾಕು; ನಾವು ದಿವ್ಯರಾಗ ಬಹುದು. ಆದ್ದರಿಂದ ಪರಮಾತ್ಮನ ಗುಣಗಳನ್ನು ಚಿಂತಿಸುತ್ತಿರಬೇಕು.

೫. ತನ್ನಾಮ ಸಂಕೀರ್ತನಯೇತ್ ।

ಅವನ ನಾಮಸಂಕೀರ್ತನೆಯನ್ನು ಮಾಡಬೇಕು.

ಪರಮಾತ್ಮನ ರೂಪಗಳು ಹಲವು. ಬೇರೆ ಬೇರೆ ಕಾಲ–ದೇಶ–ಸನ್ನಿವೇಶ ಗಳಲ್ಲಿ ಅವನು ವಿವಿಧ ರೂಪಗಳಿಂದ ಪ್ರಕಟನಾಗಿ ಜೀವಾನುಗ್ರಹವನ್ನು ಮಾಡಿರುತ್ತಾನೆ. ಅವನ ಆಯಾ ರೂಪಗಳಿಗೆ ಒಪ್ಪುವ ನಾಮಗಳೂ ಹಲವು. ಅವುಗಳನ್ನು ಋಷಿಗಳು, ಮುನಿಗಳು ಮತ್ತು ಸಾಧಕರು ತಮ್ಮ ತಪೋಬಲ ದಿಂದ, ದಿವ್ಯದೃಷ್ಟಿಯಿಂದ ಸಾಕ್ಷಾತ್ಕರಿಸಿಕೊಂಡಿರುತ್ತಾರೆ. ಅವುಗಳಲ್ಲಿ ಮಂತ್ರ ಹಿತ, ಶಕ್ತಿ ಅಡಗಿದೆ, ದೈವ ಮಹಿಮೆ ಹುದುಗಿದೆ. ಇಂಥ ನಾಮಗಳ ಪಾರಾಯಣ ಜೀವಕ್ಕೆ, ಮನಸ್ಸಿಗೆ ಪ್ರಬೋಧ, ವಾಗೀಂದ್ರಿಯಕ್ಕೆ ಸಂಸ್ಕಾರಗಳು ಉಂಟಾಗುತ್ತವೆ. ಆದ್ದರಿಂದ ಭಗವಂತನ ನಾಮಸಂಕೀರ್ತನೆಯನ್ನು ತಪ್ಪದೆ ಮಾಡಬೇಕು.

೨೨ ನೇ ಪುಟ ನೋಡಿ

ತಂದೆ ರಾಜಾಜಿ

- ವಿನೋಬಾ

[ಇಡೀ ಆಧ್ಯಾತ್ಮಿಕ ಚಿಂತನದ ಗುರಿ 'ಗುಣಗ್ರಹಣ' ಎಂಬುದಾಗಿ ಭಾವಿಸಿದ್ದ ಸಂತ ವಿನೋಬಾ ಭಾರತದ ಸ್ವಾತಂತ್ರ್ಯ ಚಳುವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದರು; ಕಾರಾಗೃಹ ವಾಸ ಅನುಭವಿಸಿದ್ದರು; ಆಶ್ರಮಗಳನ್ನು ಸ್ಥಾಪಿಸಿದ್ದರು. ಅವರು ತಮ್ಮ ಸಮಕಾಲಿನ ವ್ಯಕ್ತಿಗಳನ್ನು ರೇಖಾ ಚಿತ್ರಣದಂತೆ ಪರಿಚಯ ಮಾಡಿಕೊಟ್ಟಿದ್ಧಾರೆ. ಅಂಥ ಲೇಖನಗಳ ಸರಣಿಯಲ್ಲಿ ಇದು ಹತ್ತನೇಯದು. - ಸಂ.]

ರಾಜಾಜಿಯವರೊಂದಿಗೆ ನನ್ನ ಮೊದಲ ಭೇಟಿ ೧೯೨೩ರಲ್ಲಿ ಆಗಿತ್ತು. ಆಗ ನಾನು ಝಂಡಾ ಸತ್ಯಾಗ್ರಹದಲ್ಲಿ ಅಕೋಲಾ ಕಾರಾಗೃಹದಲ್ಲಿದ್ದೆ. ಅವರು ನನ್ನನ್ನು ಭೇಟಿ ಮಾಡಲು ಅಲ್ಲಿಗೆ ಬಂದಿದ್ದರು. ಅಲ್ಲಿಯ ನನ್ನ ಪರಿಸ್ಥಿತಿಯನ್ನು ನೋಡಿದರು; ಕೇವಲ ವಾತ್ಸಲ್ಯಭಾವದಿಂದ ಪ್ರೇರಿತರಾಗಿ ಅವರು ನನ್ನ ವಿಷಯವಾಗಿ ಪತ್ರಿಕೆಗಳಲ್ಲಿ ಒಂದು ಲೇಖನವನ್ನು ಬರೆದರು. ಅಂದಿನಿಂದ ಅವರ ವಾತ್ಸಲ್ಯದೃಷ್ಟಿ ಸತತವಾಗಿ ನನ್ನ ಮೇಲೆ ಉಳಿಯಿತು. ಆದ್ದರಿಂದ ಅವರಿಗೆ ನಾನೊಂದು ಪುಟ್ಟ ಪತ್ರ ಬರೆದೆ ತಮಿಳಿನಲ್ಲಿ. ಅದರಲ್ಲಿ ನಾನು ರಾಜಾಜಿಯವರನ್ನು 'ತಂದೈ' ಎಂದು ಕರೆದಿದ್ದೆ. 'ತಂದೈ' ಅಂದರೆ ತಂದೆ. ಪತ್ರವನ್ನು ಅವರ ಜನ್ಮದಿನದಂದು ಬರೆದಿದ್ದೆ. ಆದ್ದರಿಂದ ನಾನು ಅದರಲ್ಲಿ "ಪಲ್ಲಾಂಡು ಪಲ್ಲಾಯಿರತ್ತಾನಾಡುವಾಲಹ, ಅಂದರೆ, ನೀವು ಸಾವಿರಸಾವಿರ ವರ್ಷ ಬಾಳಿರಿ". ಎಂದು ಬರೆದಿದ್ದೆ.

ಅಖಿಲ ಭಾರತ ಮಟ್ಟದಲ್ಲಿ ಗಾಂಧೀಜಿಯೊಂದಿಗೆ ಐದು ಜನ ಸಹೋದ್ಯೋಗಿಗಳಿದ್ದರು. ನಾನು ಅವರನ್ನು 'ಪಾಂಚಾಯತನ' ಎಂದು ಕರೆದಿದ್ದೆ. ಅವರು : ಜವಾಹರಲಾಲ ನೆಹರೂ, ಸರದಾರ ಪಟೇಲ, ರಾಜೇಂದ್ರಬಾಬು, ಅಬುಲ್ ಕಲಾಮ್ ಆಜಾದ್ ಮತ್ತು ರಾಜಾಜಿ. ಈ ಐವರು ಗಾಂಧೀಜಿಯವರೊಂದಿಗೆ ಮತಭೇದವನ್ನು ಹೊಂದಿರುತ್ತಿದ್ದರು. ಆದರೆ ಅವರು ಅಂತಿಮವಾಗಿ ಗಾಂಧೀಜಿಯವರ ವಿಚಾರದೊಂದಿಗೆ ಸಹಮತವುಳ್ಳವರಾಗುತ್ತಿದ್ದರು. ಆದರೆ ವಿಶೇಷ ಸಂದರ್ಭಗಳಲ್ಲಿ ಗಾಂಧೀಜಿಯವರ ವಿಚಾರಕ್ಕೆ ವಿರೋಧವಾದಾಗ ರಾಜಾಜಿ ಅವರನ್ನು ಬಲವಾಗಿ ವಿರೋಧಿಸುತ್ತಿದ್ದರು, ಆ ಕಾರಣದಿಂದಾಗಿ ಅನೇಕ ಜನರು ರಾಜಾಜಿ ಮೇಲೆ ಕೋಪಗೊಂಡರು. ಆದರೆ ತಮಗೆ ಸತ್ಯವೆಂದು ಕಂಡುಬಂದುದನ್ನು ಮಾತನಾಡುವ ಸ್ವಭಾವ ರಾಜಾಜಿಯವರದಾಗಿತ್ತು. ಯಾರ ಬಗ್ಗೆಯೂ ಅವರ ಮನಸ್ಸಿನಲ್ಲಿ ವೈರಭಾವ ಇರಲಿಲ್ಲ.

ಒಂದು ಬಾರಿ ರಾಜಾಜಿ ಸರಿಯಾದುದನ್ನೇ ಹೇಳಿದ್ದರು, "ಗಾಂಧೀಜಿ ಯವರಿಗೆ ಭಕ್ತಿಯಲ್ಲಿ ವಿಶೇಷ ಶ್ರೇಣಿಗಳಿರುವುದು ಒಪ್ಪಿಗೆ ಇರಲಿಲ್ಲ. ಯಾವ ನಾಮವನ್ನು ಅತ್ಯಂತ ಸಾಮಾನ್ಯ ಅಶಿಕ್ಷಿತ ಸ್ತ್ರೀ - ಪುರುಷರು ಕೂಡ ಉಚ್ಚರಿಸಲು ಸಾಧ್ಯವಿತ್ತೋ ಅದೇ 'ರಾಮನಾಮ'ವನ್ನು ಬಾಪು ಇಷ್ಟಪಟ್ಟಿದ್ದರು."

ರಾಜಾಜಿಯವರ ಜೀವನಕ್ಕೆ ಅನೇಕ ಮುಖಗಳಿವೆ. ಅವುಗಳಲ್ಲಿ ಜನರನ್ನು ಆಕರ್ಷಿಸಿದ್ದು ರಾಜನೀತಿಯ ಮುಖ. ಅವರು ರಾಜನೀತಿಯ ವಿಷಯವಾಗಿ ಸತತವಾಗಿ ತಮ್ಮ ವಿಚಾರಗಳನ್ನು ಮಂಡಿಸುತ್ತಿದ್ದರು. ಯಾರು ರಾಜನೀತಿ ಕುರಿತು ಸತತವಾಗಿ ಏನನ್ನಾದರೂ ಹೇಳುತ್ತಾರೋ ಅಂಥವರ ವಿಚಾರಗಳ ಬಗ್ಗೆ ಅನೇಕರು ಭಿನ್ನಾಭಿಪ್ರಾಯ ತಾಳುವುದು ಸಹಜ. ರಾಜಾಜಿಯವರ ಹೇಳಿಕೆಗಳಲ್ಲಿ ಗುಣವಿರಲಿ ಅಥವಾ ದೋಷವಿರಲಿ ಅದು ರಾಜನೀತಿಯ ದೋಷವೆ ಹೊರತು ರಾಜಾಜಿಯವರದಲ್ಲ. ಆದರೆ ಅವರು ಯಾವುದೇ ವಿಚಾರ ವನ್ನು ಮಂಡಿಸಲಿ ಅದನ್ನು ತಟಸ್ಥಮನೋಭೂಮಿಕೆಯಿಂದ ಮಂಡಿಸುತ್ತಿದ್ದರು. ಪರಿಸ್ಥಿತಿಯಲ್ಲಿ ಬದಲಾವಣೆ ಉಂಟಾದಾಗ ತಮ್ಮ ವಿಚಾರವನ್ನು ಸಹ ಬದ ಲಾಯಿಸಿಕೊಳ್ಳಲು ಅವರಿಗೆ ಕೊಂಚವೂ ಅಂಜಿಕೆ ಇರಲಿಲ್ಲ. ಎರಡನೇ ಮಾತೇ ನೆಂದರೆ, ಯಾರ ಬಗ್ಗೆಯೇ ಆಗಲಿ ಟೀಕೆ ಮಾಡುವುದಾದರೆ ಅದನ್ನು ಸಹ ತಟಸ್ಥ ಭಾವನೆಯಿಂದ ಮಾಡುತ್ತಿದ್ದರು. ಅವರು ಯಾರೊಬ್ಬರ ಬಗ್ಗೆಯೂ ಪೂರ್ವಗ್ರಹಪೀಡಿತರಾಗಿರಲಿಲ್ಲ. **'ಸಬ ಮಹಂ ರಮ ರಹಿಯಾ ಪ್ರಭು ಎಕಿ, ಪೇಖಿ ಪೇಖಿ ನಾನಕ ಬಿಗಸಾಯಿ** ಅಂದರೆ 'ಪರಮಾತ್ಮನು' ಎಲ್ಲರ ಹೃದಯದಲ್ಲೂ ವಿರಾಜಮಾನನಾಗಿದ್ದಾನೆ, ನಾನಕ್ ಅದನು ನೋಡಿ - ನೋಡಿ ನಗುತ್ತಾನೆ" ಎಂಬ ಮಾತಿನಲ್ಲಿ ರಾಜಾಜಿಯವರಿಗೆ ನಂಬಿಕೆಯಿತ್ತು.

ರಾಜಾಜಿ ಯಾವಾಗಲೇ ಮಾತನಾಡಲಿ, ಟೀಕೆಯನ್ನೇ ಮಾಡಲಿ ಅದನ್ನು ನಗುನಗುತ್ತಾ ಮಾಡುತ್ತಿದ್ದರು.

ಒಂದು ಸಲ ರಾಜಾಜಿ ಅಮೇರಿಕೆಗೆ ಹೋಗಿದ್ದರು, ಅಲ್ಲಿ ಬಹಳಷ್ಟು ಚರ್ಚೆ ನಡೆಯಿತು. ಆದರೆ ಅದರಿಂದೇನೂ ಪ್ರಯೋಜನವಾಗಲಿಲ್ಲ. ಅವರು ಭಾರತಕ್ಕೆ ಬಂದಾದ ಮೇಲೆ ಅವರನ್ನು "ಚರ್ಚೆ ಹೇಗಿತ್ತು? 'ಫ್ರುಟ್‌ಫುಲ್' (ಸಫಲ) ಆಯಿತೇ?" ಎಂದು ಕೇಳಿದರು. ಅದಕ್ಕೆ ಅವರು ವಿನೋದ ವಾಗಿ, "ಫ್ಲಾವರ್‌ಫುಲ್" (ಪುಷ್ಪಿತ) ಆಯಿತು," ಎಂದು ಉತ್ತರಿಸಿದರು. 'ಫ್ರುಟಲೆಸ್' (ನಿಷ್ಫಲ) ಎಂದು ಹೇಳುವುದಕ್ಕೆ ಬದಲಾಗಿ 'ಫ್ಲಾವರ್‌ಫುಲ್' ಎಂದು ಹೇಳಿದರು. ಹೀಗಿತ್ತು ಅವರ ಸುಂದರ ಭಾಷೆ.

ರಾಜನೀತಿಯ ವಿಚಾರಗಳನ್ನು ಪ್ರಕಟಪಡಿಸುವಲ್ಲಿ ಅವರು ಯಾವಾಗಲೂ ಜಾಗೃತರಾಗಿದ್ದರು. ಜಾಗೃತಿ ಎಂಬುದು ರಾಜನೀತಿಗೆ ಬಹು ದೊಡ್ಡ ರಕ್ಷಾ ಕವಚವಾಗಿದೆ. ಅದಿಲ್ಲದಿದ್ದರೆ ರಾಜನೀತಿ ಎಂದೂ ಸಫಲವಾಗುವುದಿಲ್ಲ. ಅವರು 'ಸೆಂಟಿನಲ್' (ಕಾವಲುಗಾರನ) ಕೆಲಸ ಮಾಡುತ್ತಿದ್ದರು, ಜಾಗರೂಕರಾಗಿ ಇರುತ್ತಿದ್ದರು. ಅದರಿಂದಾಗಿ ಅವರು ತಪ್ಪುದಾರಿ ಹಿಡಿಯುವ ಸಂಭವ ಇರಲಿಲ್ಲ. ನಮ್ಮಲ್ಲಿಯ ಹಲವಾರು ಸಜ್ಜನರು ಯಾರು ಗಾಂಧೀಜಿಯವರೊಂದಿಗೆ ಇದ್ದರೋ ಅವರು ಒಂದಿಲ್ಲ ಒಂದು ಕಾರಣದಿಂದ 'ಮಿಲಿಟರಿ' ಯ ಸಮರ್ಥನೆ ಮಾಡುತ್ತಿದ್ದರು. ಆ ಸಮಯದಲ್ಲಿ ಕಾಂಚೀಪುರಂನಲ್ಲಿ ನಡೆದ ಸಮ್ಮೇಳನದಲ್ಲಿ ರಾಜಾಜಿಯವರು, "ಪಾಕಿಸ್ತಾನವನ್ನು ನೋಡಿ ಹೆದರಿಕೊಳ್ಳುವ ಎಷ್ಟು ಜನರಿದ್ದೀರೋ ಅವರಿಗೆ ಸಮ್ಮೇಳನಕ್ಕೆ ಬರಲು ಯಾವ ಹಕ್ಕೂ ಇಲ್ಲ. ಅಂಥವರು ಸಮ್ಮೇಳನದಿಂದ ಹೊರಗೆ ಹೋಗಬೇಕು," ಎಂದು ಕಠೋರವಾಗಿ ನುಡಿದರು. ಆಗ ನಾನು ನನ್ನ ಮನಸ್ಸಿನಲ್ಲಿ. "ಈ ವೃದ್ಧ ಮನುಷ್ಯನ ಮಾತಿನಲ್ಲಿ ಈ ಶಕ್ತಿ ಎಲ್ಲಿಂದ ಬಂತು? ಈ ಶಕ್ತಿ ಶರೀರದ್ದಲ್ಲ, ಆತ್ಮದ್ದು" ಎಂದು ಅಂದುಕೊಂಡೆ.

ರಾಜಾಜಿ ಗವರ್ನರ್ ಜನರಲ್ ಆಗಿದ್ದರು, ಮುಖ್ಯ ಮಂತ್ರಿಯೂ ಆಗಿದ್ದರು. ಅವರು ಅನೇಕ ಪ್ರಕಾರದ ಕೆಲಸ ಮಾಡಿದರು. ಕಾನೂನಿನ ದೃಷ್ಟಿಯಿಂದ ಅವರು ನೇಕಾರರಿಗಾಗಿ ಅನೇಕ ಬೇಡಿಕೆಗಳನ್ನು ಮುಂದೆ ಇಟ್ಟಿದ್ದರು. ಮದ್ರಾಸ್ ರಾಜ್ಯದಲ್ಲಿ ಎರಡನೇ ಮಹತ್ವದ ಜನಸಂಖ್ಯೆ ನೇಕಾರರದಿತ್ತು. ಅಲ್ಲಿ ಹತ್ತು ಜನರಲ್ಲಿ ಒಬ್ಬ ನೇಕಾರನಿದ್ದ, ಅವರಿಗೆ ಕೆಲಸವಿರಲಿಲ್ಲ. ಆದ್ದರಿಂದ ಅವರು ಈ ಬೇಡಿಕೆಗಳನ್ನು ಇಟ್ಟಿದ್ದರು. ಅವರು ಕಂಟ್ರೋಲ್ ತೆಗೆದು ಹಾಕಿದ್ದರು. ಅದರಿಂದಾಗಿ ಜನರಲ್ಲಿ ವಿಶ್ವಾಸವುಂಟಾಗಿತ್ತು. "ನನ್ನ ಜೀವನ – ಚರಿತ್ರೆಯನ್ನು ಬರೆಯುವುದಾದಲ್ಲಿ 'ಇವನು ಕಂಟ್ರೋಲ್ ತೆಗೆದು ಹಾಕಿದ' ಎಂದಿಷ್ಟೇ ಬರೆಯಿರಿ" ಎಂಬುದಾಗಿ ರಾಜಾಜಿ ಒಂದು ಸಲ ಹೇಳಿದ್ದರು.

ತಮಿಳುನಾಡಿನಲ್ಲಿ ಮದ್ಯಪಾನ ಇತ್ತು. ಆದಾಯ ಬರುತ್ತದೆಂಬ ಕಾರಣಕ್ಕಾಗಿ ಮದ್ಯಪಾನವನ್ನು ಜಾರಿಯಲ್ಲಿಡುವುದು ಸರಿಯಲ್ಲವೆಂದು ಭಾವಿಸಿ ರಾಜಾಜಿ ಅದನ್ನು ನಿಲ್ಲಿಸಿದ್ದರು. ಪ್ರತಿಯೊಂದು ವಿಷಯದಲ್ಲೂ ಅವರು ಕುಶಲಮತಿಗಳಾಗಿದ್ದರು. ರಾಜ್ಯ ಸರಕಾರಕ್ಕೆ ನಷ್ಟವಾಗಬಾರದೆಂಬ ಕಾರಣದಿಂದ ಅವರು ಸೇಲ್ಸ್ ಟ್ಯಾಕ್ಸ್ ಜಾರಿಗೆ ತಂದರು. ಮದ್ಯಪಾನ ನಿಷೇಧದಿಂದ ಆಗುತ್ತಿದ್ದ ನಷ್ಟವನ್ನು ಸೇಲ್ಸ್ ಟ್ಯಾಕ್ಸ್‌ನಿಂದ ತುಂಬಿದರು. ಇಂಥ ಬುದ್ಧಿ

ವಂತಿಕೆ ರಾಜಾಜಿ ಅವರದಾಗಿತ್ತು. ಆದರೆ ಸರ್ಕಾರ ಏನು ಮಾಡಿದೆ? ಮದ್ಯ ಪಾನ ನಿಷೇಧವನ್ನಂತು ಜಾರಿಗೆ ತರಲಿಲ್ಲ ಮತ್ತು ಸೇಲ್‌ಟ್ಯಾಕ್ಸನ್ನು ಸಹ ಜಾರಿಯಲ್ಲಿಟ್ಟರು. ಅಂದರೆ, ಎರಡು ಬುದ್ಧಿವಂತಿಕೆ ಆಯಿತು ಮತ್ತು ಎರಡರಷ್ಟು ಆದಾಯವೂ ಬಂತು. ಇದಕ್ಕೆ ಸಂಸ್ಕೃತದಲ್ಲಿ **ಲೋಭಮೂಲಾನಿ ಪಾಪಮೂಲಾನಿ** ಎಂದೆನ್ನುತ್ತಾರೆ. ಆದರೆ ರಾಜಾಜಿ ಮದ್ಯಪಾನ ನಿಷೇಧ ವನ್ನು ಅತ್ಯಂತ ಅಗತ್ಯವೆಂಬುದಾಗಿ ಭಾವಿಸಿದ್ದರು.

ರಾಜಾಜಿ ದೀರ್ಘಾಯು ಆಗಿದ್ದರು. ಅವರು ತಮ್ಮ ೯೪ನೇ ವರ್ಷದಲ್ಲಿ ತೀರಿಕೊಂಡರು. ಅವರ ಆಹಾರ ಸಾಧಾರಣವಾಗಿರುತ್ತಿತ್ತು. ಸಾಮಾನ್ಯ ಜನರ ಊಟದಂತೆಯೇ ಅವರ ಊಟ ಇದ್ದಿತು. ಸ್ವಲ್ಪ ಕಡಿಮೆ ಊಟ ಮಾಡುತ್ತಿದ್ದರಷ್ಟೆ. ಆಗ ಯಾರೋ ಅವರನ್ನು ಕೇಳಿದರು, "ನೀವು ದೀರ್ಘಾ ಯುವಾಗಿದ್ದೀರಿ. ನೀವು ಊಟ ಮಾಡುವುದೂ ಕಡಿಮೆ. ಆದರೂ ಕೂಡ ಇಷ್ಟು ಶಕ್ತಿ ಹೇಗೆ ಇದೆ? ಇದಕ್ಕೆ ಕಾರಣವೇನು?" ರಾಜಾಜಿ, "ಅದಕ್ಕೆ ಒಂದೇ ಕಾರಣವಿದೆ. ನಾನು ನನ್ನ ರಾಜ್ಯದಲ್ಲಿ ಮದ್ಯಪಾನ ನಿಷೇಧ ಮಾಡಿದ್ದೇನೆ. ಆ ಕಾರಣದಿಂದಾಗಿ ಇಲ್ಲಿಯ ಬಡ ಸಹೋದರಿಯರು ನನಗೆ ಆಶೀರ್ವಾದ ಮಾಡಿದ್ದಾರೆ. ಅವರ ಜೀವನ ಸುಗಮವಾಗಿ ನಡೆಯುತ್ತಿದೆ. ಈಗ ಅವರಿಗೆ ಗಂಡಂದಿರಿಂದ ಏಟು ಬೀಳುತ್ತಿಲ್ಲ. ಮನೆಯಲ್ಲಿ ಸಂತೋಷ ಇದೆ. ಅವರೆಲ್ಲರ ಈ ಆಶೀರ್ವಾದದ ಕಾರಣದಿಂದಾಗಿ ನಾನು ದೀರ್ಘಾಯು ಆಗಿದ್ದೇನೆ" ಎಂದು ಹೇಳಿದರು.

ರಾಜಾಜಿ ಹಿಂದಿಗೆ ವಿರೋಧಿಯಾಗಿದ್ದರೆಂದು ಕೆಲವರು ತಿಳಿದಿದ್ದಾರೆ. ಅವರು ಹಿಂದಿ ಬಗ್ಗೆ ತಮಿಳಿನಲ್ಲಿ ಬರೆದ ಲೇಖನ ಓದಿದ್ದೆ. ಆ ಲೇಖನದಲ್ಲಿ ಅವರು, "ಹಿಂದಿಯನ್ನು ಬಲಾತ್ಕಾರವಾಗಿ ಹೇರುವುದು ತಪ್ಪು; ಆದರೆ ಹಿಂದಿ ಯನ್ನು ಕಲಿಯದೇ ಇರುವುದು ಮೂರ್ಖತೆ" ಎಂದು ಬರೆದಿದ್ದರು. ಎಷ್ಟೊಂದು ಸಮತೋಲ ಹೇಳಿಕೆ!

ನಾನು ಸುಮಾರು ಇಡೀ ತಮಿಳ ಸಂತ ಸಾಹಿತ್ಯವನ್ನು ಓದಿದ್ದೇನೆ. ರಾಜಾಜಿಯವರ ಎಲ್ಲ ಪುಸ್ತಕಗಳನ್ನೂ ಓದಿದ್ದೇನೆ. ಚಕ್ರವರ್ತಿ ತಿರುಮಹನ್, ಕಣ್ಣನ್ ಕಾಟ್ಟಿಯವಳಿ, ಭಜಗೋವಿದಂ ಮತ್ತು ಕೊನೆಯದಾಗಿ ತಾವರಂಗಾಳಿನ್ ಇಲ್ಲಮ್. ಅವರು ಬರೆದಿರುವ ಯಾವ ಪುಸ್ತಕವನ್ನೂ ಓದದೆ ಬಿಟ್ಟಿಲ್ಲ. ರಾಜಾಜಿ ಕೊನೆಯವರೆಗೂ ಬರೆದರು. ಮರಣಕ್ಕಿಂತ ಮೊದಲು ಒಂದೆರಡು ವಾರಗಳವರೆಗೂ ಬರೆಯುತ್ತಲೇ ಇದ್ದರು. ಇದೇ ರೀತಿ ನನ್ನ ಕಾಲದ ಮುಖ್ಯ–ಮುಖ್ಯ ನಾಯಕರೆಲ್ಲರೂ ನಿರಂತರ ವಿಚಾರ ಪ್ರಚಾರಕ್ಕಾಗಿ ಕೊನೆಯ

ವರೆಗೂ ಬರೆಯುತ್ತಲೇ ಇದ್ದರು.

ರಾಜಾಜಿಯವರ ಜೀವನಕ್ಕೆ ಇಷ್ಟೆಲ್ಲ ಮುಖಗಳಿವೆ. ಆದರೆ ನನಗೆ ಅತ್ಯಧಿಕ ಆಕರ್ಷಣೆ ಆದದ್ದು ಅವರ ಆಧ್ಯಾತ್ಮಿಕ ಮುಖ. ಅವರು ತಮಿಳಿನಲ್ಲಿ ಬರೆದ ಎಲ್ಲ ಆಧ್ಯಾತ್ಮಿಕ ಸಾಹಿತ್ಯವನ್ನು ಓದಿದ್ದೇನೆ. ನನಗೆ ಅದರಿಂದ ಬಹಳ ಆನಂದವಾಯಿತು. ರಾಜನೀತಿಯ ಬಗ್ಗೆ ಅವರು ಬರೆದಿರುವಂಥದು ಉಳಿಯುವುದಿಲ್ಲ; ಅವರ ಆಧ್ಯಾತ್ಮಿಕ ಸಾಹಿತ್ಯ – ಮುಖ್ಯವಾಗಿ ತಮಿಳಿನಲ್ಲಿ ಬರೆದುದು – ಮಾತ್ರ ಬಹಳ ಕಾಲದವರೆಗೆ ಉಳಿಯುವುದು, ರಾಜಾಜಿ ಧರ್ಮ ಮತ್ತು ಅಧ್ಯಾತ್ಮದ ಉತ್ತಮ ಜ್ಞಾನಿಯಾಗಿದ್ದರು; ಅದಕ್ಕಿಂತ ಹೆಚ್ಚಾಗಿ ಮಹಾನ್ ಭಕ್ತರಾಗಿದ್ದರು. ಒಂದು ಬಾರಿ ನಮ್ಮ ಆಶ್ರಮದ ಒಬ್ಬ ಸಹೋದರಿ ಅವರನ್ನು ಭೇಟಿ ಮಾಡಿ ಬ್ರಹ್ಮವಿದ್ಯಾ ಮಂದಿರದ ಪರಿಚಯ ಮಾಡಿಕೊಡುತ್ತಾ ಅಲ್ಲಿ ಹೆಣ್ಣುಮಕ್ಕಳು ಬ್ರಹ್ಮವಿದ್ಯೆ ಇತ್ಯಾದಿಗಳ ಅಧ್ಯಯನ ಮಾಡುತ್ತಾರೆಂಬುದಾಗಿ ಅವರಿಗೆ ತಿಳಿಸಿದರು. ಆಗ ಅವರು, "ಆ ತಾರ್ಕಿಕ ತತ್ವಜ್ಞಾನದಲ್ಲಿ ಬೀಳುವ ಅಗತ್ಯವೇನಿದೆ? ಹೆಣ್ಣುಮಕ್ಕಳು ಎರಡು ಕೆಲಸ ಮಾಡಲಿ, ಒಂದು ಬೇಸಾಯ, ಇನ್ನೊಂದು ಭಕ್ತಿ."

ರಾಜಾಜಿಯವರು ಕಾಯಿಲೆಯಿಂದ ಇದ್ದರು. ಆಗ ಸುಬ್ಬಲಕ್ಷ್ಮೀ ಅವರ ಬಳಿ ಕೂತು ವಿಷ್ಣು ಸಹಸ್ರನಾಮ ಹೇಳಿದರು. ಅಂತಿಮ ಕಾಲದಲ್ಲಿ ರೋಗಿಗೆ ಔಷಧ ಕುಡಿಸುವ ಬದಲು ವಿಷ್ಣುಸಹಸ್ರನಾಮವನ್ನು ಕೇಳಿಸಿಸಬೇಕು. ಅದರಿಂದ ಆ ರೋಗಿಯು ಗುಣ ಹೊಂದವನು ಇಲ್ಲವೆ ಸಹಸ್ರನಾಮದ ಸ್ಮರಣೆಯಿಂದ ಬಹಳ ಶಾಂತಿಪೂರ್ವಕವಾಗಿ ದೇವರ ಬಳಿಸಾರವನು. ವಿಷ್ಣುಸಹಸ್ರನಾಮದ ಕೊನೆಯ ಶ್ಲೋಕ ಹೀಗಿದೆ:–

ಶಂಖಭೃತ್ - ನಂದಕಿ ಚಕ್ರೀ ಶಾಂರ್ಗಧನ್ವಾ ಗದಾಧರಃ ।
ರಥಾಂಗಪಾಣಿರಕ್ಷೋಭ್ಯಃ ಸರ್ವಪ್ರಹರಣಾಯುಧಃ ॥

ರಾಜಾಜಿಯವರು ಇದನ್ನು ಒಂದು ಲೇಖನದಲ್ಲಿ ಉಲ್ಲೇಖ ಮಾಡಿದ್ದರು. ಅದರಲ್ಲಿ ಅವರು **ರಥಾಂಗಪಾಣಿಯ** ಅರ್ಥವನ್ನು ಭಕ್ತನ ರಥವು ಭೂಮಿಯ ಮೇಲೆ ಒಳ್ಳೆಯ ರೀತಿಯಲ್ಲಿ ಓಡುವಂತೆ ಮಾಡುವವನು ಎಂದು ವ್ಯಾಖ್ಯೆ ಮಾಡಿದ್ದಾರೆ. ರಾಜಾಜಿ ರಾಮಾಯಣವನ್ನು ಬರೆದಿದ್ದಾರೆ. ಅದರ ಹೆಸರು 'ಚಕ್ರವರ್ತಿ ತಿರುಮಹನ್', ಅಂದರೆ, ಚಕ್ರವರ್ತಿಯ ಶ್ರೀಪುತ್ರ, ಅಂದರೆ, ರಾಮ. ಚಕ್ರವರ್ತಿ ರಾಮ ಜೀವಂತವಾಗಿದ್ದಾನೆ, ಚಕ್ರವರ್ತಿ ರಾಜ–ಗೋಪಾಲಾಚಾರಿ ಹೋದರು, ರಾಮನಲ್ಲಿ ವಿಲೀನವಾದರು. ಇಂಥ ಮಹಾನ್‌ರು ಹೋದಾಗ ನನ್ನ ಮನಸ್ಸಿನ ಮೇಲೆ ಬಹಳ ಪರಿಣಾಮ ಉಂಟಾಗುತ್ತದೆ.

ರಾಜಾಜಿ ವೃದ್ಧರಾಗಿದ್ದರು, ಕಾಯಿಲೆಯಿಂದಿದ್ದರು. ಅವರ ಮರಣವಾಯಿತು. ಅಂದರೆ ಅವರ ಮುಕ್ತಿಯಾಯಿತು. ಅದು ಶೋಚನೀಯ ಘಟನೆಯಲ್ಲ. ಆದ್ದರಿಂದ ರಾಜಾಜಿಯವರ ಮರಣದ ಬಗ್ಗೆ, "ರಾಜಾರಾಮನಿದ್ದಾನೆ, ರಾಜಾಜಿ ಹೋದರು" ಎಂಬುದಾಗಿ ನಾನು ಹೇಳಿದ್ದೆ. ★

'ಮೈತ್ರಿ' ಸಾಭಾರ : ಅನು – ಸು.ಕೌ

ಸುಜನಾ ೧೩ ನೇ ಪುಟದಿಂದ

ಅಪ್ರತ್ಯಕ್ಷ ಉಪದೇಶವಿದೆಯೋ, ಸೂಚನೆಗಳಿವೆಯೊ, ನೇರ ಆಜ್ಞೆ ಇಲ್ಲವೋ, ಸಜೆಸ್ಟಿವ್ ಆಗಿರುತ್ತದೋ ಅಂಥಲ್ಲಿ ಅದನ್ನು ಸರ್ವೋತ್ತಮ ಸಾಹಿತ್ಯವೆಂದು ತಿಳಿಯಲಾಗುತ್ತದೆ. ವಿನೋಬಾರ ಈ ವ್ಯಾಖ್ಯೆಯು ಸುಜನಾರವರ ಕಾವ್ಯದಲ್ಲಿಯೂ, ಗದ್ಯದಲ್ಲಿಯೂ ಪುಂಖಾನುಪುಂಖವಾಗಿ ದೊರೆಯುತ್ತದೆ. ವಿನೋಬಾರವರೇ ಹೇಳಿದಂತೆ ಸಮಾಜಕ್ಕೆ ಹೊಸ ತಿರುವನ್ನು ಕೊಡುವಲ್ಲಿ ಮೂರು ಶಕ್ತಿಗಳು ಕೆಲಸ ಮಾಡುತ್ತವೆ. ವಿಜ್ಞಾನ ಶಕ್ತಿ, ಆತ್ಮಜ್ಞಾನ-ಶಕ್ತಿ ಮತ್ತು ಸಾಹಿತ್ಯ ಶಕ್ತಿ. ಇಂಥ ಮೂರು ಶಕ್ತಿಗಳಲ್ಲಿ ಒಂದಾದ ಸಾಹಿತ್ಯ ಶಕ್ತಿಯನ್ನು ತಮ್ಮದನ್ನಾಗಿರಿಸಿಕೊಂಡು ನಮ್ಮಂಥ ಸಾಮಾನ್ಯ ಚೇತನರಲ್ಲಿಯೂ ಅಸಾಮಾನ್ಯತೆಯನ್ನು ತಂದುಕೊಡುವ ಕವಿ, ಸಾಹಿತಿ, ವಿಚಾರವಾದಿ ಮುಂತಾದ ಎಲ್ಲ ಎಲ್ಲೆಗಳನ್ನೂ ಮೀರಿ ಇರುವ ಸಜ್ಜನತೆ, ಸಾತ್ವಿಕತೆ ಮತ್ತು ಸಹೃದಯತೆಯಂಥ ಮಾನವೀಯ ಗುಣಗಳ ಸಾಕಾರ ಮೂರ್ತಿಯಾದ ಸುಜನಾ ನೂರು ವರ್ಷ ಬಾಳಲಿ, ನಮಗೆ ದಾರಿ ತೋರಲಿ. ★

ಸದಾಚಾರ ವಿಧಾಯಿನೀ ೧೬ ನೇ ಪುಟದಿಂದ

೬. ಸರ್ವಪ್ರಕಾರೇಣ ಈಶ್ವರಂ ಶರಣಂ ವ್ರಜೇತ್ ।

ಎಲ್ಲ ರೀತಿಗಳಿಂದ ಭಗವಂತನಲ್ಲಿ ಶರಣಾಗಬೇಕು.

ಈಶ್ವರ ಸರ್ವಪ್ರಭು, ಜಗತ್ತಿನಲ್ಲಿ ಎಲ್ಲವೂ ಅವನಿಗೆ ಅಧೀನ; ಅವನು ಸರ್ವಜ್ಞ, ಸರ್ವಶಕ್ತ. ಅವನ ಪ್ರಜೆಗಳು ನಾವೆಲ್ಲ, ನಮ್ಮ ಅರಿವೊ ಸೀಮಿತ, ಸಂಕುಚಿತ, ಸ್ವಲ್ಪ. ಯಾವುದೇ ರೀತಿಯಿಂದಲೂ ನಾವು ದುರ್ಬಲರು. ಎಲ್ಲವನ್ನೂ ತಿಳಿಯಬೇಕು, ಎಲ್ಲವನ್ನೂ ಪಡೆಯಬೇಕು ಎಂಬ ನಮ್ಮ ಹೋರಾಟ ನಿರಂತರವಾಗಿ ಮುಂದುವರಿಯುತ್ತಿದ್ದರೂ ಈವರೆಗೆ ನಾವು ತಿಳಿದಿರುವುದು ತೀರ ಕಡಿಮೆ, ಪಡೆದಿರುವುದಂತೂ ಅತ್ಯಲ್ಪ. ಆದ್ದರಿಂದ ನಾವು ಸ್ವಯಂಪ್ರಭುಗಳಾಗಲು ಸಾಧ್ಯವಿಲ್ಲ. ಪರಾವಲಂಬನೆ ನಮಗೆ ಅನಿವಾರ್ಯ. ಹಾಗಾಗಿ ಎಲ್ಲಕ್ಕಿಂತಲೂ 'ಪರ'ನಾದ ಪರಮಾತ್ಮನನ್ನು ಅವಲಂಬಿಸುವುದು ಅತ್ಯಂತ ಉಚಿತ. ★

ಶುದ್ಧ ರಾಜಕೀಯದತ್ತ......——

ಕಾನೂನು ರಚನಾಕಾರರೇ ಕಾನೂನು ಉಲ್ಲಂಘಕರು

– ಎನ್. ವಿಠಲ್
ಅಧ್ಯಕ್ಷರು, ಕೇಂದ್ರ ಜಾಗೃತ ಆಯೋಗ

ನನ್ನ ಕಾರ್ಯವ್ಯಾಪ್ತಿಯಲ್ಲಿ ನ್ಯಾಯಾಂಗ ಮತ್ತು ಶಾಸಕಾಂಗ ಸೇರಿಕೊಂಡಿಲ್ಲ ಆದರೂ ಕೂಡ, ಈ ದೇಶದ ಒಬ್ಬ ನಾಗರೀಕನಾಗಿಯೂ ಮತ್ತು ಕೇಂದ್ರ ಜಾಗೃತ ಆಯೋಗದ ಅಧ್ಯಕ್ಷನಾಗಿಯೂ ಹಾಗೂ ರಾಜಕೀಯದ ಅಪರಾಧೀಕರಣ ಮತ್ತು ಕಾರ್ಯಾಂಗದಲ್ಲಿಯ ಭ್ರಷ್ಟಾಚಾರ ಈ ಎರಡರ ಪರಿಣಾಮದ ಬಗ್ಗೆ ಆಸಕ್ತಿ ಹೊಂದಿದವನಾಗಿಯೂ ನಾನು ಈ ವಿಷಯವನ್ನು ಚುನಾವಣಾ ಆಯೋಗದ ಮುಖ್ಯ ಅಧಿಕಾರಿಯವರಲ್ಲಿ ಚುನಾವಣಾ ಕಾನೂನನ್ನು, ಅದರಲ್ಲಿಯೂ ಮುಖ್ಯವಾಗಿ ಜನತಾ ಪ್ರತಿನಿಧಿ ಕಾನೂನನ್ನು ಹೇಗೆ ತಿದ್ದುಪಡಿ ಮಾಡಬಹುದು ಎಂಬುದಾಗಿ ಪ್ರಸ್ತಾಪಿಸಿದ್ದೇನೆ. ಈ ತಿದ್ದುಪಡಿಯ ಉದ್ದೇಶ್ಯ ಕಾನೂನನ್ನು ರಚಿಸುವವರು ಕಾನೂನನ್ನು ಉಲ್ಲಂಘಿಸುವವರಾಗಬಾರದಂತೆ ನೋಡಿಕೊಳ್ಳುವುದು ಹೇಗೆ ಎಂಬ ಬಗ್ಗೆ ಆ ನಿಟ್ಟಿನಲ್ಲಿ ನಾನು ಈ ಕೆಳಗೆ ಕಾಣಿಸಿದ ಸಲಹೆಗಳನ್ನು ಕೊಟ್ಟಿದ್ದೇನೆ:-

ಚುನಾವಣಾ ಆಯೋಗ ಅಥವಾ ಅಟಾರ್ನಿ ಜನರಲ್ ಅಥವಾ ಸುಪ್ರಿಂ ಕೋರ್ಟ್ ಇವುಗಳಲ್ಲಿಯ ಯಾವುದಾದರೊಂದರ ಪ್ರಕಟಣೆಯ ಮೇರೆಗೆ ಯಾವ ರಾಜಕೀಯ ಪಕ್ಷ ತನ್ನ ಲೆಕ್ಕಗಳನ್ನು ಆಡಿಟರ್ ಅವರಿಂದ ಆಡಿಟ್‌ಮಾಡಿಸಿಲ್ಲವೋ ಅಂಥ ಪಕ್ಷಕ್ಕೆ ಚುನಾವಣೆಯಲ್ಲಿ ಸ್ಪರ್ಧಿಸಲು ಅನುಮತಿ ಕೊಡಕೂಡದು. ಅದೇ ರೀತಿ ಆದಾಯ ತೆರಿಗೆಯನ್ನು ಕೊಡದೆ ಇರುವ ರಾಜಕೀಯ ಪಕ್ಷಗಳಿಗೂ ಅನುಮತಿ ಕೊಡಕೂಡದು.

ಚುನಾವಣಾ ತಾರೀಖಿಗೂ ಮುಂಚೆ ಬರಬಹುದಾದ ಭ್ರಷ್ಟಾಚಾರದ ದೂರುಗಳನ್ನು ಚುನಾವಣಾ ಆಯೋಗ ಸ್ವೀಕರಿಸಿ ಅದರ ಬಗ್ಗೆ ಪರಿಶೀಲನೆ ನಡೆಸಬೇಕು. ಇದರಿಂದಾಗಿ ಚುನಾವಣಾ ಕಾಲದಲ್ಲಿ ನಡೆಯಬಹುದಾದ ಭ್ರಷ್ಟ ಆಚರಣೆಗಳಿಗೆ ತಡೆಹಾಕಬಹುದು. ಕಾಯಿಲೆಗೆ ಉಪಚಾರ ಮಾಡುವುದಕ್ಕಿಂತ ಆ ಕಾಯಿಲೆ ಬಾರದಂತೆ ನೋಡಿಕೊಳ್ಳುವುದು ಯಾವಾಗಲೂ ಶ್ರೇಯಸ್ಕರ.

ಜನತಾ ಪ್ರಾತಿನಿಧ್ಯ ಕಾಯ್ದೆಯ ವಿಧಿ ೨೭ ರ ಅಡಿಯಲ್ಲಿ ಕಾಣಿಸಲಾದ ವಿವರಣೆ ೧ ನ್ನು ತೆಗೆದುಹಾಕಬೇಕು.

ವಿಚಾರ ದೀಪ್ತಿ...............

೧೯೪೭ರಲ್ಲಿ ಪ್ರತ್ಯಕ್ಷ ಗುಲಾಮಗಿರಿಯಿಂದ ಮುಕ್ತಿ ಹೊಂದಿದ ನಾವು ಇಂದು ಜಾಗತೀಕರಣದಿಂದಾಗಿ ಪರೋಕ್ಷವಾದ ಗುಲಾಮ ಗಿರಿಗೆ ತಳ್ಳಲ್ಪಟ್ಟಿದ್ದೇವೆ. ಇಂದಿನ ಪರಿಸ್ಥಿತಿಯನ್ನು ನೋಡಿದರೆ ಹಿಂದಿನ ಪರಿಸ್ಥಿತಿಯೇ ಚೆನ್ನಾಗಿತ್ತೆಂದು ಅನಿಸುತ್ತದೆ. ಏಕೆಂದರೆ ಆಗ ವಿದೇಶಿಯರ ವಿರುದ್ಧ ಮಾತ್ರ ಹೋರಾಟವಿತ್ತು. ಈಗ ಸಿಕ್ಕಷ್ಟನ್ನು ದೋಚಿಕೊಳ್ಳಬೇಕೆಂಬ ಮನೋಭಾವದ ಜನ ನಾವಾಗಿದ್ದೇವೆ. ನಾವು ವಿವೇಕ ಮತ್ತು ವಿವೇಚನೆ ಎರಡನ್ನೂ ಕಳೆದುಕೊಂಡಿದ್ದೇವೆ. ದೇಶ ಭಕ್ತರು ಎಂದು ಹೇಳಿಕೊಳ್ಳುವ ಜನರೇ ಈಗ ಈ ಕೆಲಸ ಮಾಡಿ ದುರಂತ ಸೃಷ್ಟಿಸಿದ್ದಾರೆ. ಹಿಂದೆ ಕಟ್ಟಕಡೆಯ ಮನುಷ್ಯನ ಏಳಿಗೆ ಯನ್ನು ಮನಸಿನಲ್ಲಿಟ್ಟುಕೊಂಡು ಯೋಜನೆಯನ್ನು ರೂಪಿಸಲಾಗು ತ್ತಿತ್ತು. ಈಗ ಮೊಟ್ಟಮೊದಲನೇ ವ್ಯಕ್ತಿಯ ಏಳಿಗೆಯೇ ಮುಖ್ಯ ವಾಗಿದೆ. ನಿರ್ಬಂಧವಿಲ್ಲದೆ ಯಾರು ಯಾವ ದೇಶದಲ್ಲಾದರೂ ನೆಲೆ ಸುವ ಅವಕಾಶ ಇದ್ದರೆ ಮಾತ್ರ ಬಡತನವನ್ನು ನಿರ್ಮೂಲನ ಮಾಡಬಹುದು. ಇಲ್ಲವಾದಲ್ಲಿ ಬಡವರೇ ನಿರ್ಮೂಲನವಾಗುತ್ತಾರೆ. ವಿಶ್ವಮಾನವ ತತ್ವ ಈ ರೀತಿ ರಾಕ್ಷಸರೂಪ ತಾಳಿ ಬರುತ್ತದೆ ಎಂದು ಯಾರೂ ಊಹಿಸಿರಲಿಲ್ಲ. ಉದಾರೀಕರಣ, ಖಾಸಗೀಕರಣ ಜಾಗತೀಕರಣಗಳಿಗೆ ಅಂತಃಕರಣವೇ ಇಲ್ಲ.

–ದೇವನೂರು ಮಹಾದೇವ

೨೩ ನೇ ಪುಟದಿಂದ

ನೈತಿಕವಾಗಿ ದಾರಿತಪ್ಪಿರುವ ಅಥವಾ ಇತರೆ ಅಪರಾಧಗಳಿಗಾಗಿ ಆಪಾದಿಸಿರುವಂಥ ವ್ಯಕ್ತಿಗೆ ಚುನಾವಣೆಯಲ್ಲಿ ಸ್ಪರ್ಧಿಸಲು ಅನುಮತಿ ಸಿಗಬಾರದು. ಚುನಾವಣಾ ಆಯೋಗವು ಈ ಆಪಾದನೆಗಳನ್ನು ಗುರುತಿಸಬೇಕು ಈ ವಿಷಯದಲ್ಲಿ ಆಪಾದನೆಯ ಗಂಭೀರತೆ ಮತ್ತು ಮೊದಲ ಮಾಹಿತಿಯನ್ನು ಮಾತ್ರ ಗಣನೆಗೆ ತೆಗೆದುಕೊಳ್ಳದೆ ನ್ಯಾಯದಂಡಾಧಿಕಾರಿಯಂಥ ನ್ಯಾಯಾಂಗ ಅಧಿಕಾರಿಯೊಬ್ಬನಿಂದ ಇದೆಲ್ಲವನ್ನು ಪರಿಶೀಲಿಸಿಸಿ ಆಪಾದನಾ ಪಟ್ಟಿಯನ್ನು ಸಲ್ಲಿಸುವ ಹಂತದವರೆಗೆ ಹೋಗಬೇಕು. ಹೀಗೆ ಚುನಾವಣಾ ಆಯೋಗದಿಂದ ಆಪಾದಿತನೆಂದು ಗುರುತಿಸಲ್ಪಟ್ಟ ವ್ಯಕ್ತಿಯು ಚುನಾವಣೆಯಲ್ಲಿ ಸ್ಪರ್ಧಿಸಲು ಅನರ್ಹನಾಗುತ್ತಾನೆಂದಾಗ ಅಪರಾಧಿಗಳು ರಾಜಕಾರಣವನ್ನು ಪ್ರವೇಶಿಸುವುದು ಮತ್ತು ಜನತಾ ಪ್ರತಿನಿಧಿಯಾಗುವುದು ತಪ್ಪುತ್ತದೆ. ಈ ವಿಚಾರದಲ್ಲಿ ಹೆಚ್ಚಿನ ಹೊಣೆಗಾರಿಕೆಯನ್ನು ಉಮೇದುವಾರನ ಮೇಲೆಯೇ ಹಾಕಬೇಕು. ಅವನೇ ತಾನು ಅಪರಾಧಿಯಲ್ಲವೆಂದು ಘೋಷಣೆ ಮಾಡುವಂತಿರಬೇಕು. ಒಂದು ವೇಳೆ ಅಪರಾಧಿಯೆಂದು ಗೊತ್ತಾಗಿದ್ದರೆ ಅವನು ಅದರ ವಿವರಣೆಗಳನ್ನು ಕೊಡಬೇಕು. ಕೋರ್ಟಿನಿಂದ ಈ ಮೊದಲು ಕೊಡಲಾಗಿದ್ದ ಶಿಕ್ಷೆಯ ವಿವರಗಳನ್ನು ಸಹ ಅವನು ಕೊಡಬೇಕು. ಈ ಸಲಹೆಯನ್ನು ಕುರಿತು ಚುನಾವಣಾ ಆಯೋಗ ಏನು ಕ್ರಮಕೈಗೊಳ್ಳುವುದೋ ಗೊತ್ತಿಲ್ಲ ಈ ಬಗ್ಗೆ ರಾಷ್ಟ್ರವ್ಯಾಪಿ ಚರ್ಚೆನಡೆಯಬೇಕು ಮತ್ತು ತನ್ಮೂಲಕ ರಾಜಕೀಯದಲ್ಲಿ ಭ್ರಷ್ಟಾಚಾರದ ಸಮಸ್ಯೆಯನ್ನು ತಡೆಯಲು ಸೂಕ್ತ ಕ್ರಮಕೈಗೊಳ್ಳುವಂತಾಗಬೇಕೆಂದು ನಾನು ಅಭಿಪ್ರಾಯ ಪಡುತ್ತೇನೆ. ಅದೇ ರೀತಿ "ಭ್ರಷ್ಟ ಸಾರ್ವಜನಿಕ ನೌಕರರ ಆಸ್ತಿ ಮುಟ್ಟುಗೋಲು" ಕಾಯ್ದೆಯನ್ನು ಸಹ ಜಾರಿಗೆ ತರಬೇಕು. ಈ ಕಾಯ್ದೆ ೧೯೯೯ರಿಂದಲೂ ಅನುಷ್ಠಾನಗೊಳ್ಳದೆ ಸರಕಾರದ ಮುಂದೆ ಇದೆ. ಇದು ಕೂಡಲೆ ಜಾರಿಗೆ ಬರುವಂತಾಗಬೇಕು.

ಅನೇಕ ಬಾರಿ ಕಾನೂನುಗಳಲ್ಲಿಯ ದೋಷಗಳಿಂದಾಗಿ ಎಲ್ಲವೂ ನಿಧಾನ ಪ್ರವೃತ್ತಿಯಾಗಿ ನಡೆಯುತ್ತವೆ. ಅದರಿಂದಾಗಿ ಭ್ರಷ್ಟಾಚಾರ ಉಂಟಾಗುತ್ತದೆ. ಆದ್ದರಿಂದ ಹೊಸ ಕಾನೂನುಗಳನ್ನು ತರುವುದರ ಜೊತೆಗೆ ಈಗಾಗಲೇ ಇರುವ ಕಾನೂನುಗಳ ಜಾರಿ ಒತ್ತಾಯ ತರಬೇಕು. ಕಾನೂನು ಆಗಿ ಹನ್ನೆರಡು ವರ್ಷಗಳಾದರೂ ಜಾರಿಗೆ ಬರದೇ ಇರುವಂಥ ಉದಾಹರಣೆಗಳಿವೆ.

ರಾಜಕೀಯ ಭ್ರಷ್ಟಾಚಾರವನ್ನು ಕಡಿಮೆ ಮಾಡಲು ಸಾಧ್ಯವಾಗಬಹುದಾದ ಕೆಲವು ಸಲಹೆಗಳು ಈ ರೀತಿ ಇವೆ:–

1. ಗರಿಷ್ಠ ಮಿತಿ ಇಲ್ಲದೆಯೇ ವ್ಯಕ್ತಿಗಳು ಮತ್ತು ಸಂಘ – ಸಂಸ್ಥೆಗಳು ರಾಜಕೀಯ ಪಕ್ಷಗಳಿಗೆ ದೇಣಿಗೆ ಕೊಡಲು ಅವಕಾಶ ಇರಬೇಕು ಮತ್ತು ಆ ದೇಣಿಗೆಯು ಆದಾಯ ತೆರಿಗೆಯ ರಿಯಾಯಿತಿಗೆ ಒಳಪಡಬೇಕು;

2. ಅಪರಾಧದ ಪಟ್ಟಿಯನ್ನು ಹೊಂದಿರುವ ವ್ಯಕ್ತಿಯು ಚುನಾವಣೆಯಲ್ಲಿ ಸ್ಪರ್ಧಿಸದಂತಿರಬೇಕು.

3. ಜನತಾ ಪ್ರತಿನಿಧಿ ಕಾನೂನಿನ ವಿಧಿ ೭೭ರ ಅಡಿಯಲ್ಲಿರುವ ಒಂದನೇ ವಿವರಣೆಯನ್ನು ತೆಗೆದು ಹಾಕಬೇಕು,

4. ಆಡಿಟ್ ಆದ ಲೆಕ್ಕ ಪತ್ರಗಳನ್ನು ಸಲ್ಲಿಸದ ರಾಜಕೀಯ ಪಕ್ಷಗಳಿಗೆ ಸ್ಪರ್ಧಿಸಲು ಅವಕಾಶ ಇರಕೂಡದು;

5. ಆದಾಯ ತೆರಿಗೆ ಪಾವತಿಸಿದ ಬಗ್ಗೆ ಪ್ರಮಾಣ ಪತ್ರ ಸಲ್ಲಿಸಿದ ವ್ಯಕ್ತಿಯೂ ಸಹ ಚುನಾವಣೆಗೆ ಸ್ಪರ್ಧಿಸಕೂಡದು.

6. ಭ್ರಷ್ಟಾಚಾರದ ಆರೋಪಗಳು ಬಂದ ತಕ್ಷಣ ಸಮಯವನ್ನು ಕಳೆಯದೆ ಚುನಾವಣಾ ಆಯೋಗ ತನಿಖೆ ಪ್ರಾರಂಭಿಸಬೇಕು.

7. ತಟಸ್ಥ ಮತ್ತು ವಸ್ತುಸ್ಥಿತಿ ಆಧಾರಿತ ಸಮಿತಿಗಳ ಮೂಲಕ ಆಯ್ಕೆ ಮಾಡಲಾದ ಅಧಿಕಾರಿಗಳನ್ನು ಸೂಕ್ಷ್ಮ ಸ್ಥಾನಗಳಲ್ಲಿರಿಸಬೇಕು ಮತ್ತು ಅಂಥ ಅಧಿಕಾರಿಗಳನ್ನು ಮೂರು ವರ್ಷಕ್ಕೆ ಮುನ್ನ ಅವರನ್ನು ವರ್ಗ ಮಾಡಕೂಡದು,

8. 'ಭ್ರಷ್ಟ ಸಾರ್ವಜನಿಕ ನೌಕರರ ಆಸ್ತಿ ಮುಟ್ಟುಗೋಲು' ಕಾಯ್ದೆಯನ್ನು ತಕ್ಷಣ ಜಾರಿಗೆ ತರಬೇಕು,

9. 'ಬೇನಾಮಿ ಹಸ್ತಾಂತರ ನಿಷೇಧ ಕಾಯ್ದೆ'ಯನ್ನು ಸಹ ಕೂಡಲೆ ಜಾರಿಗೆ ತರಬೇಕು.

ನಾನು ಈ ವಿಷಯಗಳನ್ನು ಕೇಂದ್ರ ಜಾಗೃತ ಆಯೋಗದ ಅಧ್ಯಕ್ಷನೆಂಬ ಅಧಿಕಾರದಿಂದ ಎತ್ತಿರುವುದಿಲ್ಲ. ಸಾರ್ವಜನಿಕ ಆಡಳಿತದಲ್ಲಿ ೪೦ಕ್ಕೂ ಹೆಚ್ಚು ವರ್ಷದ ಅನುಭವವುಳ್ಳ ಓರ್ವ ಪ್ರಜೆಯಾಗಿ ಎತ್ತಿದ್ದೇನೆ. ಈ ವಿಚಾರಗಳು ಚರ್ಚೆಗೆ ದಾರಿಮಾಡಿಕೊಡುವವೆಂದು ಆಶಿಸಿದ್ದೇನೆ. ಅದರಿಂದಾಗಿ ಭಾರತ ಸ್ವಚ್ಛವಾದ ಹಾಗೂ ಆರ್ಥಿಕವಾಗಿ ಮತ್ತು ಸೇನಾ ಬಲದಿಂದ ಬಲಿಷ್ಠವಾದ ದೇಶವಾಗಿ ಹೊರ ಹೊಮ್ಮುವುದೆಂದೂ ಆಶಿಸಿದ್ದೇನೆ. ★

(ಅನು : ಸು. ಕೌ.)

ಪ್ರಜಾಸತ್ತೆಗೆ ಜನಶಕ್ತಿಯೇ ಅಂತಿಮ ಅಧಿಷ್ಠಾನ

– ದಾದಾ ಧರ್ಮಾಧಿಕಾರಿ

(ದಾದಾ ಧರ್ಮಾಧಿಕಾರಿ ಭಾರತದ ಶ್ರೇಷ್ಠ ಚಿಂತಕರಲ್ಲಿ ಒಬ್ಬರಾಗಿದ್ದರು. ಜೀವನವನ್ನು ವಸ್ತುನಿಷ್ಠೆಯ ದೃಷ್ಟಿಯಿಂದ ನೋಡಿದರು. ಅದರ ಶತಮಾನೋತ್ಸವದ ಸಂದರ್ಭವನ್ನು ಉಪಯೋಗಿಸಿಕೊಂಡು ಓದುಗರಿಗೆ ಅವರ ವಿಚಾರಪೂರ್ಣ ಅನುಭವದ ಮಾತುಗಳನ್ನು ಇಲ್ಲಿ ಕ್ರಮಶಃ ಕೊಡಲಾಗುತ್ತಿದೆ. ಇದು ಎಂಟನೆಯ ಸರಣಿ. -ಸಂ)

ಕಲೆಕ್ಟಿವ್ ಯಾವ ಪ್ರಕಾರದ್ದಾದರೂ ಆಗಲಿ ; ಕಮ್ಯೂನ್, ಕಿಬ್ಬುತ್ಸ್ – ಅಥವಾ ಸತ್ಯಾಗ್ರಹಾಶ್ರಮ. ಅದರಲ್ಲಿ ಎಲ್ಲರೂ ಸದಸ್ಯರು. ಒಂದು ಕಲೆಕ್ಟಿವ್ ಇದೆ : ಅದರಲ್ಲಿ ಯಾರೂ ಸದಸ್ಯರಿಲ್ಲ; ಎಲ್ಲರೂ ಸಂಗಾತಿಗಳು, ಪರಸ್ಪರ ಸಂಬಂಧಿಗಳು. ಈ ಕಲೆಕ್ಟಿವ್‌ನ ಹೆಸರು ಕುಟುಂಬ. ಸದಸ್ಯತನ ಇಲ್ಲದ್ದು. ಈ ಸಮುದಾಯ ಒಂದೇ. ಆದ್ದರಿಂದ ಅದನ್ನು ಕುಲೀನತೆ ಎನ್ನುತ್ತೇವೆ. ಕುಲೀನತೆಗೆ ಹಿಂದೆ ಒಂದು ಅರ್ಥ ಇತ್ತು. ಆಭಿಜಾತ್ಯ ಎಂಬ ಗರ್ವ. ಈಗ ಕುಲೀನತೆ ಎಂದರೆ ನಮ್ರತೆ. ಕುಟುಂಬದ ಸಂಬಂಧ ನೈಸರ್ಗಿಕ. ಇದೊಂದು ದೋಷ. ನೈಸರ್ಗಿಕ ಸಂಬಂಧ ಸ್ವಾಯತ್ತವಲ್ಲ. ಸಂಸ್ಕೃತಿ, ನಾಗರಿಕತೆ ಎಲ್ಲವೂ ಸ್ವಯಂ ಪ್ರೇರಿತ, ಮನುಷ್ಯನ ಬಾಳು ಸುಸಂಸ್ಕೃತ, ಪ್ರಾಕೃತವಲ್ಲ. ಪ್ರಕೃತಿಗನುಸಾರವಾಗಿ ಮನುಷ್ಯ ಜೀವನ ಸಾಗದು. ಬಾಳು ನೈಸರ್ಗಿಕವಲ್ಲ, ಸಾಂಸ್ಕೃತಿಕ. ಏಕೆ? ಸಾಮಾಜಿಕವಾದುದರಿಂದ. ಸಾಮಾಜಿಕ ಜೀವನ ಸಾಂಸ್ಕೃತಿಕ ಜೀವನ. ಒಂದು ಪತ್ರಿಕೆಯಲ್ಲಿ ಒಂದುವ್ಯಂಗ್ಯ ಚಿತ್ರ ಬಂದಿತ್ತು. ಹೆಂಡತಿಯ ಹುಟ್ಟಿದ ದಿನ ಗಂಡ ಅವಳಿಗಾಗಿ ಮುತ್ತಿನ ಹಾರ ತರುತ್ತಾನೆ. 'ಇಂಥ ತುಟ್ಟಿಯ ಮುತ್ತಿನ ಹಾರವನ್ನೇಕೆ ತಂದಿರಿ? ನನಗೆ ಒಂದು ಮೋಟಾರು ಬೇಕಾಗಿತ್ತು' ಎಂದಳು ಹೆಂಡತಿ. ಪೇಟೆಯಲ್ಲಿ ಮೋಟಾರು ಸಿಗಲಿಲ್ಲ. ಈ ಕಲ್ಚರ್ ಮುತ್ತಿನ ಹಾರ ಸಿಕ್ಕಿತು ತಂದೆ ಎಂದ ಆತ. ಕಲ್ಚರ್ ಮುತ್ತು ನೈಸರ್ಗಿಕವಲ್ಲ. ಬರೀ ಪ್ರತಿ. ಕೃತ್ರಿಮ. ಇಲ್ಲಿ ಕಲ್ಚರ್ ಎಂದರೆ ಪರಿಶುದ್ಧ, ಪರಿಮಾರ್ಜಿತ, ಪರಿಷ್ಕೃತ. ಇಂಥ ಶುದ್ಧ ಸಾಮಾಜಿಕ ಜೀವನ ಸ್ನೇಹಮೂಲಕವಾದರೆ ಅದರಲ್ಲಿ ಸಾಮಾಜಿಕತೆಯ ಪ್ರೇರಣೆ ಬರುತ್ತದೆ. ಕಮ್ಯೂನಿಟಿ ಹೇಗೆ ಸಂಘಟಿತವಾದೀತು ಎಂದೆ ನಿನ್ನೆ. ಫೆಡರೇಷನ್ ಆದೀತೆ? ಕುಟುಂಬ ಆದೀತೆ? ಮನುಷ್ಯಲೋಕವೆಲ್ಲವೂ ಒಂದು ಸಮುದಾಯವಾದೀತೆ? ಒಂದು ವಿಶ್ವಕುಟುಂಬವಾದೀತೆ? ಇದು ಔಪಚಾರಿಕ ಸಂಘಟನೆ. ರಾಷ್ಟ್ರಗಳಲ್ಲಿ ಮನುಷ್ಯರಲ್ಲಿ ಪರಸ್ಪರ ವಿಶ್ವಾಸ ಪ್ರೀತಿ ಇಲ್ಲದಿದ್ದರೆ ಇದರ ಆಧಾರ ಏನು? ಜಗತ್ ...

ಪೋಲೀಸು, ಅದರ ಬಲ ಎಷ್ಟು? ಇಲ್ಲಿರುವ ಪೋಲೀಸರನ್ನೇ ನೋಡಿ. ಈ ಪ್ರಾಂತಕ್ಕೆ ಈ ಜನ ಸಾಕೆ? ಈ ಜನರು ಸ್ವಭಾವತಃ ಶಾಂತಿಪ್ರಿಯರು. ಆದ್ದರಿಂದ ಸಾಕು. ದಿನವೂ ಜಗಳ ಆಡರು. ದಿನವೂ ಒಬ್ಬರ ಮನೆಗೆ ಒಬ್ಬರ ಬೆಂಕಿ ಹಚ್ಚುವುದಿಲ್ಲ. ಅಲ್ಲಿ ಏನು ನಡೆದಿದೆ? ಒಂದು ವಿಮಾನ ರಷ್ಯಾದ ಆಕಾಶದಲ್ಲಿ ಹೋಯಿತು. ಈಗ ಆಕಾಶದಲ್ಲೂ ಭಾಗಗಳಾಗಿವೆಯಲ್ಲ. ಸೂರ್ಯ ಪ್ರಕಾಶದ ಹಂಚಿಕೆಯೊಂದು ಉಳಿದಿದೆ. ಅದೂ ಆದೀತು. ನಮ್ಮ ಆಕಾಶದಲ್ಲಿ ನಿಮ್ಮ ವಿಮಾನ ಹಾರಿದರೆ ಬಿಟ್ಟೇವೆ? ಕೆಳಗೆ ಉರುಳಿಸಿದರು. ಇಬ್ಬರಿಗೂ ವಾದ ವಿವಾದ. ನಿಮ್ಮ ಬಲವನ್ನು ತೋರಿಸುತ್ತೀರಾ? ನಾವೂ ಒಂದು ಕೈ ತೋರಿಸುತ್ತೇವೆ ಎಂಬ ಮನೋವೃತ್ತಿ ಎರಡೂ ಕಡೆ ಇದ್ದರೆ ಸಾಮುದಾಯಿಕ ಸುರಕ್ಷಿತತೆ ಅಸಂಭವ. ಜಗತ್ ಸರಕಾರ, ಜಗತ್ – ಪೋಲೀಸಿಗೆ ತಳಹದಿ ಬೇಡವೆ? ಸರಕಾರಗಳು ತಳಹದಿ ಹಾಕಬಲ್ಲವೆ? ಹಾಕಲಾರವು. ಯು.ಎನ್.ಓ.ದಲ್ಲಿ ಮಾತು ಬಂತು. ನಮ್ಮ ವಿಮಾನ ತಪ್ಪಿಬಂತು ಎಂದರು. ಇನ್ನೊಮ್ಮೆ ತಪ್ಪಿ ಬಂದರೆ? ಇಷ್ಟೇ ತಾನೆ? ಒಳಗೆ ತಪ್ಪಿಬಂತಂತೆ. ಬೇಕೆಂತಲೇ ಬಂತು ಎನ್ನುತ್ತಾರೆ. ಒಳಗಡೆ ಪರಸ್ಪರ ವಿಶ್ವಾಸವಿಲ್ಲ. ಮೇಲೆ, ಬಾವುಟದ ಮೇಲೆ ಮಾತ್ರ ಶಾಂತಿ ಬೇಕು ಎಂದು ಬರೆಹ. ನಮಗೆ ಆಯುಧಗಳು ಬೇಡ, ಶಾಂತಿ ಬೇಕು ಎಂದು ಸಾಧಾರಣ ಜನರು ಗುಂಪು ಕಟ್ಟಿಕೊಂಡು ಹೋಗಿದ್ದರು. ಅಲ್ಲಿ ಐಸೆನ್‌ಹೋವರ್ ಹೇಳಿದ್ದೇನು? ಜನರಿಗೆ ಯುದ್ಧ ಬೇಕಾಗಿಲ್ಲ. ಯುದ್ಧ ಹೂಡುವುದು ಸರಕಾರಗಳು. ರಷ್ಯಾ, ಅಮೆರಿಕಾ, ಇಂಗ್ಲೆಂಡು, ಯಾವ ದೇಶದ ಜನರಿಗೂ ಯುದ್ಧ ಬೇಡ. ಆದರೆ ಯು.ಎನ್.ಓ.ದಲ್ಲಿರುವವರೆಲ್ಲ ಸರಕಾರಗಳ ಪ್ರತಿನಿಧಿಗಳು, ಜನತೆಯ ಪ್ರತಿನಿಧಿಗಳಲ್ಲ. ಆದ್ದರಿಂದ ಇವೆಲ್ಲ ಮಾತು ಬಂಡವಿಲ್ಲದ್ದು. ಇಲ್ಲಿ ವಿಶ್ವಕುಟುಂಬ, ಕಿಬ್ಬುತ್ಸ್ ಎನ್ನುತ್ತಿದ್ದರೆ ಅಲ್ಲಿ ವಿನೋಬಾ ಗ್ರಾಮಕುಟುಂಬ, ಗ್ರಾಮಪರಿವಾರ, ಮಾನವೀಯ ಪರಿವಾರದ ಮಾತು ಆಡುತ್ತಿದ್ದಾರೆ. ವಿಶ್ವಕುಟುಂಬ ನಮಗೆ ಬಹಳ ಹಳೆಯ ಶಬ್ದ. 'ವಸುಧೈವ ಕುಟುಂಬಕಂ.' ವಸುಧೆಯೇ ಕುಟುಂಬ, ವಿಶ್ವವೇ ಕುಟುಂಬ. ಈಗಿನ ಸಂದರ್ಭದಲ್ಲಿ ಅದರ ಅರ್ಥ – ಜಗತ್ತಿನ ಸಾಧಾರಣ ಜನರು ಈಗ ನಾಗರಿಕರೂ ಅಲ್ಲ.

ನಾಗರಿಕತೆಗಿಂತ ಹೆಚ್ಚು ವ್ಯಾಪಕವಾದುದು ಮನುಷ್ಯನ ಮಾನವತೆ. ನಾಗರಿಕತೆ ಇವತ್ತು ಇರಬಹುದು, ನಾಳೆ ಇಲ್ಲದಾಗಬಹುದು. ನಾಗರಿಕತೆ ಕ್ಷೀಣವಾಗಬಹುದು. ನಿಮ್ಮ ನಾಗರಿಕತ್ವವನ್ನು ಕಿತ್ತುಕೊಳ್ಳಬಹುದು. ನಾಗರಿಕತ್ವ ನೈಸರ್ಗಿಕವೇ ಆದರೂ ರಾಜ್ಯ ಅಥವಾ ಸಮಾಜ ಕೊಟ್ಟಿದ್ದು. ಭಾರಿ ಅಪರಾಧಿಯ ನಾಗರಿಕತ್ವ ಕ್ಷೀಣವಾಗಬಹುದು. ಕೆಲವು ದಿನ ಅಮೇರಿಕಾದಲ್ಲಿ

ಇದ್ದರೆ ನಿಮಗೆ ಅಮೆರಿಕಾದ ನಾಗರಿಕತ್ವ ಸಿಗಬಹುದು. ಶ್ರೀನಿವಾಸಶಾಸ್ತ್ರಿಗಳಿಗೆ, ಮುಕುಂದರಾವ್ ಜಯಕರ್‌ಗೆ ಲಂಡನ್ನಿನ ನಾಗರಿಕತ್ವವನ್ನು ಕೊಟ್ಟಿದ್ದರು. ಇದನ್ನು ಕೊಡಬಹುದು ಅಥವಾ ಕಿತ್ತುಕೊಳ್ಳಬಹುದು. ಮಾನವತೆಯನ್ನು ಕೊಡಲೂ ಸಾಧ್ಯವಿಲ್ಲ, ಕಿತ್ತುಕೊಳ್ಳಲೂ ಸಾಧ್ಯವಿಲ್ಲ. ಅದು ಸ್ವಯಂಸಿದ್ಧ. ಆದ್ದರಿಂದ ಮಾನವಕುಟುಂಬದ ಆಧಾರವನ್ನು ಅರಸಬೇಕು ವಿಶ್ವಸಮಾಜ. ರಾಜಕೀಯ ಸಂಸ್ಥೆಗಳು ಇದಕ್ಕೆ ಉತ್ತರ ಕೊಡಲಾರವು. ಇದಕ್ಕೆ ಉತ್ತರವನ್ನು ಕ್ರಾಂತಿಕಾರಿಯೇ ಕೊಡಬಲ್ಲ. ಅವನು ಇರುವ ಕಡೆ ವಿಶ್ವಕುಟುಂಬದ ತಳಹದಿ ಹಾಕುತ್ತಾನೆ. ವಿಶ್ವಕುಟುಂಬದ ತಳಹದಿ ಸಮಾಜದಲ್ಲಿ, ಜನತೆಯಲ್ಲಿ ಬೀಳುತ್ತದೆ. ಪಾರ್ಲಿಮೆಂಟಿನಲ್ಲಲ್ಲ, ಪಾರ್ಲಿಮೆಂಟು ಅದಕ್ಕೆ ಮುದ್ರೆ ಒತ್ತೀತು. ಮಾತಿನಲ್ಲಿ ಬರೆದಿಟ್ಟೀತು. ಆ ಭಾವನೆಯನ್ನು ಹುಟ್ಟಿಸಲಾರದು. ಆದ್ದರಿಂದ ನಮಗೆ ಅರ್ಥವಾಗಬೇಕು : ಶಾಸನಸಭೆಯ ಸರ್ವೋಪರಿ ಸತ್ತೆಯೇ ಪ್ರಜಾತಂತ್ರವಲ್ಲ. ಪಾರ್ಲಿಮೆಂಟಿನ ವೈಧಾನಿಕ ಸತ್ತೆ ಸರ್ವೋಪರಿ ಇದ್ದೀತು. ಆದರೆ ಅಂತಿಮ ಸತ್ತೆ ಯಾರದು? ನಾಗರಿಕರದು, ಜನತೆಯದು. ನಾಗರಿಕರ ಈ ಅಧಿಸತ್ತೆಯ ಆಧಾರ ಅವರ ಪಾರಸ್ಪರಿಕ ಭಾವನೆ, ಪರಸ್ಪರ ಸಹಕಾರ. ಈ ಪಾರಸ್ಪರಿಕತೆಯೇ ಸ್ನೇಹ. ಸ್ನೇಹ ನಿರಪೇಕ್ಷವಾದುದು. ಪ್ರೇಮಪ್ರಪಂಚದಲ್ಲಿ ಪ್ರತಿಪ್ರೇಮ ಇಲ್ಲ. ಕಾಮುಕನ ಕಾಮಪ್ರೇಮ, ವೈಷಯಿಕ ಪ್ರೇಮಗಳಲ್ಲೂ ಬದಲು ಇಲ್ಲ. ಒಬ್ಬ ಹುಡುಗ ಒಬ್ಬ ಹುಡುಗಿಯನ್ನು ಪ್ರೇಮಿಸುತ್ತಾನೆ. ಅವಳು ಅವನನ್ನು ಪ್ರೇಮಿಸಬೇಕು ಎಂಬುದೇನೂ ಇಲ್ಲ. ಅವಳು ಪ್ರೇಮಿಸದಿದ್ದರೂ ಇವನು ಬಿಡ. ಆದರೆ ಪ್ರೇಮದಲ್ಲಿ ಸ್ವಾರ್ಥ, ಅಪೇಕ್ಷೆಗಳು ಬಂದರೆ ಅದರಲ್ಲಿ ಸಾಮಾಜಿಕ ಪ್ರೇರಣೆ ಹುಟ್ಟದು. ಭರ್ತೃಹರಿ ಹೇಳಿದಾನೆ –'ಧಿಕ್ ತಾಂಚ ಮದನಂ ಚ ಮಾಂ ಚ.' ನಾನು ಪ್ರೇಮಿಸಿದ ಹೆಣ್ಣು ಮತ್ತಾರನ್ನೋ ಪ್ರೇಮಿಸುತ್ತಾಳೆ. ಅವಳ ಪ್ರೇಮಕ್ಕೂ ನನ್ನ ಪ್ರೇಮಕ್ಕೂ ಎಲ್ಲಕ್ಕೂ ಧಿಕ್ಕಾರ. ಬ್ರಹ್ಮಚರ್ಯವನ್ನು ಉಪದೇಶಿಸುತ್ತಿಲ್ಲ, ಅಧ್ಯಾತ್ಮವನ್ನು ಹೇಳುತ್ತಿಲ್ಲ. ಆದರೆ ಮನುಷ್ಯ ಸಂಯಮಿಯಾಗಬೇಕು, ಸ್ತ್ರೀಲಂಪಟನಾಗಬಾರದು. ಸಾಮಾಜಿಕ ಪ್ರೇರಣೆಗೆ ಇದು ಆವಶ್ಯಕ. ಮನುಷ್ಯನ ಮಾನವತೆಗೆ ನಿರಪೇಕ್ಷ, ನಿಃಸ್ವಾರ್ಥವಾಗಬೇಕು ಪ್ರೇಮ. ಅಪೇಕ್ಷೆ, ಸ್ವಾರ್ಥ ಇದ್ದರೆ ಅಲ್ಲಿ ಮೈತ್ರಿ ಇಲ್ಲ. ಈಗ ಎರಡು ಮಾತು ಬಹಳ ಬಳಕೆಯಲ್ಲಿವೆ ; ಫೆಲೋ ಹಾಗೂ ಕಾಮ್ರೇಡ್. ಕ್ವೇಕರ್ಸ್ ತಾವು ಫ್ರೆಂಡ್ ಎಂದರು. ತಮ್ಮದು ಫೆಲೋಶಿಪ್ ಎಂದರು. ಫೆಲೋಶಿಪ್ ಆಫ್ ಫ್ರೆಂಡ್ಸ್ ಆಫ್ ಟ್ರೂತ್ ಅಂತೆ. ಕಮ್ಯೂನಿಸ್ಟರಲ್ಲಿ ಸೋಷಲಿಸ್ಟರಲ್ಲಿ ಕಾಮ್ರೇಡ್ ಎನ್ನುತ್ತಾರೆ. ಯಾರು ಫೆಲೋ, ಯಾರು ಕಾಮ್ರೇಡ್? ನಿಮ್ಮ

ಸಂಸ್ಥೆಯ ಸದಸ್ಯ ಫ್ರೆಂಡ್. ನಿಮ್ಮ ಸಂಸ್ಥೆಯವನಲ್ಲವೋ ಅವನು ನಾನ್-ಫ್ರೆಂಡ್. ಕಮ್ಯೂನಿಸ್ಟ್ ಪಕ್ಷದ ಸದಸ್ಯನಾದರೆ ಕಾಮ್ರೇಡ್. ಅಲ್ಲವೋ ನಾನು ಕಾಮ್ರೇಡ್ ಅಲ್ಲ. ನಮ್ಮ ಜೊತೆಗೆ ಬರಲಿಲ್ಲವೋ ಅವನು ವಿರೋಧಿ. ಬೈಬಲಿನಲ್ಲಿ ಬರುತ್ತದೆ ; ಇದರ ಹೆಸರು ಸದಸ್ಯತೆ.

ಸದಸ್ಯತೆ ವ್ಯಾವರ್ತಕ, ಮನುಷ್ಯನನ್ನು ಬೇರೆ ಬೇರೆ ಮಾಡುತ್ತದೆ. ಔಪಚಾರಿಕ ಸಂಬಂಧ ಮನುಷ್ಯರನ್ನು ಬೇರೆ ಬೇರೆ ಮಾಡುತ್ತದೆ. ಸಂಸ್ಥೆ, ಸದಸ್ಯತೆ ಸದಸ್ಯರನ್ನು ಸೇರಿಸುತ್ತದೆ, ಆದರೆ ಮನುಷ್ಯರನ್ನು ಬೇರೆ ಮಾಡುತ್ತದೆ. ನಾಗರಿಕತೆಯೂ ಅಷ್ಟೆ. ಮಾನವತೆ ವ್ಯಾಪಕ. ಅದರಿಂದಲೇ ವಿನೋಬಾ ವಿಶ್ವಮಾನವ ಎನ್ನುತ್ತಿದಾರೆ. ಕೇವಲ ಅಂತರರಾಷ್ಟ್ರೀಯ ಭಾವನೆಸಾಲದು. ವಿಶ್ವಮಾನವತೆ ಬೇಕು. ಶುದ್ಧ ಮಾನವ ಯಾವ ಪಟ್ಟಿಯಲ್ಲೂ ಇಲ್ಲ. ಅಂಥವನೇ ವಿಶ್ವ ಮಾನವ. ಇಂಥ ವಿಶುದ್ಧ ಮಾನವರ ಕುಟುಂಬವಾದೀತು. ಇಂಥ ಕುಟುಂಬ ಹುಟ್ಟು, ಮದುವೆಗಳಿಂದ ಸೀಮಿತವಾಗದು. ಜನ್ಮಸಂಬಂಧ, ಮದುವೆಯ ರಕ್ತ ಸಂಬಂಧಗಳ ಪರಿಮಿತಿಯು ಕುಟುಂಬ ಸಂಸ್ಥೆ ಪರಂಪರಾಗತ ಕುಟುಂಬ ಸಂಸ್ಥೆ. ಆದ್ದರಿಂದ ಸಮಾಜವಾದಿಗಳೂ ಸಾಮ್ಯವಾದಿಗಳೂ ಅವನ್ನು ವಿರೋಧಿಸಿದರು. ಈ ಸಾಂಪ್ರದಾಯಿಕ ಸಂಸ್ಥೆಯನ್ನು ಮುರಿಯೋಣ ಎಂದರು. ಏಕೆ? ಇದರ ಆಧಾರ ರಕ್ತ, ವಿವಾಹ. ಜನ್ಮದಿಂದ ಮದುವೆಯಿಂದ ಆಗುವ ಕುಟುಂಬ ಸ್ವೇಚ್ಛಾಪ್ರೇರಿತವಲ್ಲ ಆದ್ದರಿಂದ ಅದರಲ್ಲಿ ಸ್ವಾತಂತ್ರ್ಯವಿಲ್ಲ. ಸ್ವೇಚ್ಛಾ ಪ್ರೇರಿತವಲ್ಲದ ಸಂಸ್ಥೆಗಳು ಒಟ್ಟುಗೂಡಿ ಸರ್ವಾಧಿಕಾರದಲ್ಲಿ ಪರಿಣತವಾಗುತ್ತವೆ. ಸಂಸ್ಥೆಗಳು ಸ್ವಯಂ ನಿರ್ಮಿತವಲ್ಲದಿದ್ದರೆ, ಜನತೆಯಲ್ಲಿ ಹುಟ್ಟಿದಿದ್ದರೆ, ಅವು ಸ್ವಾಯತ್ತ ಸಂಸ್ಥೆಗಳಾಗುವುದಿಲ್ಲ, ಸಂಸ್ಥೆಗಳನ್ನು ಕಟ್ಟಿ ಜನರ ಮೇಲೆ ಹೇರಿದಿರಿ. ನಮ್ಮ ಅಧಿಕಾರವನ್ನು ನಿಮಗೆ ವಹಿಸಿಕೊಡುತ್ತೇವೆ ಎಂದಿರಿ. ಈಗ ನಾವು ಪಂಚಾಯಿತಿಗಳಿಗೆ ಅಧಿಕಾರವನ್ನು ಕೊಡುತ್ತೇವೆ. ರಾಜಾಸ್ತಾನದಲ್ಲಿ ಪಂಚಾಯಿತಿ ಶಾಸನ ಆಯಿತು. ಅಯೂಬ್‌ಖಾನ್ ಪಂಚಾಯಿತಿಗಳಿಗೆ ಅಧಿಕಾರ ಕೊಡುತ್ತಾನಂತೆ. ಯುಗೋಸ್ಲಾವಿಯಾದಲ್ಲಿ ಸರ್ವಾಧಿಕಾರಿತನ ಇದೆ. ಆದರೂ ಗ್ರಾಮಸಮಾಜಗಳಿಗೆ ಅಧಿಕಾರ ಕೊಟ್ಟಿದಾರೆ. ಇದು ವಹಿಸಿಕೊಟ್ಟ ಅಧಿಕಾರ. ಯಾರಿಗೆ ಸತ್ತೆಯ ಪ್ರೇರಣೆಯೆ ಇಲ್ಲವೋ ಅನುಭವ ಇಲ್ಲವೋ ಅವರು ಸತ್ತೆಯನ್ನು ಉಪಯೋಗಿಸಲಾರರು. ಹಾಗಾದರೆ ಅವರಿಗೆ ಸತ್ತೆಯನ್ನು ಕೊಡಬಾರದೆ? ಕೊಡಬಾರದು. ಅಲ್ಲಿ ಆಗಬೇಕಾದ್ದು, ಅಧಿಕಾರ ಸ್ವಾಯತ್ತವಾಗಬೇಕು. ಸಮಾಜ ಸಮಾಜವಾದದಲ್ಲಿ ಈಗ ಎರಡು ಪಕ್ಷ ಆಗಿವೆ ಜಗತ್ತಿನಲ್ಲಿ. ಪ್ರಜಾತಂತ್ರಾತ್ಮಕ ಸಮಾಜವಾದ ಒಂದು ಪಕ್ಷ. ಬ್ರಿಟಿಷ್ ಕೂಲಿಕಾರ ಪಕ್ಷ, ಅಮೆರಿಕಾದ ಸಮಾಜ

ವಾದಿಗಳ ಪಕ್ಷ. ಫ್ರಾನ್ಸಿನದು, ಬೇರೆ ದೇಶಗಳದು ಒಂದು ಪಕ್ಷ. ಎಲ್ಲ ಸಂಸ್ಥೆಗಳೂ ಲೋಕಾಯುಕ್ತವಾಗಬೇಕು ಎಂದು ಒಂದು ಪಕ್ಷ ಹೇಳುತ್ತದೆ. ಲೋಕಾಯುಕ್ತ ಎಂದರೆ ನಾಗರಿಕರ ಸಾಮಾಜಿಕ ಭಾವನೆಯಿಂದ ಹುಟ್ಟಬೇಕು ಸಂಸ್ಥೆ. ಇವು ಸ್ವಯಂಪ್ರೇರಿತ, ಸ್ವಾಯತ್ತ ಆಗಬಲ್ಲವು. ಸತ್ತಾವಾದದಲ್ಲಿ ಇದು ಸಾಧ್ಯವಲ್ಲ. ನಮಗೆ ಪ್ರಜಾತಂತ್ರದಲ್ಲಿ ಪ್ರಜಾಸತ್ತೆ ಬೇಕು ಎನ್ನುತ್ತಾರೆ. ಪ್ರಜಾಸತ್ತೆಗೆ ಏನು ಬಲ? ಜನತೆಯ ಶಕ್ತಿ. ಜನತಾಶಕ್ತಿಯೆ ಅದರ ಅಂತಿಮ ಅಧಿಷ್ಠಾನ. ಆದ್ದರಿಂದ ಪ್ರಜಾಸತ್ತೆಯಲ್ಲಿ, ಪ್ರಜಾತಂತ್ರದಲ್ಲಿ ಜನತೆಯ ಶಕ್ತಿ ಮೂಡಬೇಕು – ಇದು ನಮ್ಮ ಆಹ್ವಾನ. ★

ಸನ್ಮಾನ್ಯರಿಂದ...........

ನಿಮ್ಮ ಪತ್ರಿಕೆ ನಮಗೆ ಹೆಚ್ಚಿನ ತಿಳುವಳಿಕೆ ಕೊಡುತ್ತಿದೆ. "ನ್ಯಾಯಾಂಗದ ಕ್ರಿಯಾಶೀಲತೆ – ಒಂದು ವಿವೇಚನೆ" ತುಂಬ ಚೆನ್ನಾಗಿ ಮೂಡಿಬಂದಿದೆ.

ಹಡದಾಳು **–ಹೆಚ್. ಕೆ. ಧರ್ಮೇಶ್**

"ಜನಪದ ವಿಚಾರ" ಚೆನ್ನಾಗಿದೆ.

ಮೈಸೂರು **–ಮನು ಜೆ. ಯು.**

ಕೆಲದಿನಗಳ ಹಿಂದೆ ಮೇಲುಕೋಟೆಗೆ ನಾನು ಸಕುಟುಂಬ ಸಮೇತನಾಗಿ ಬಂದಿದ್ದಾಗ ಬಹಳ ವರ್ಷಗಳ ನಂತರ ತಮ್ಮ ಭೇಟಿಯಾಗುವ ಸೌಭಾಗ್ಯವು ನನ್ನದಾಯಿತು. ಇದರಿಂದ ಬಹಳ ಸಂತೋಷವಾಗಿದೆ.

ವೈಚಾರಿಕ ತಿಂಗಳ ಡೈಜೆಸ್ಟ್‌ನಲ್ಲಿರುವ ಲೇಖನಗಳು ಎಂದಿನಂತೆ ಮೊನಚಾಗಿವೆ, ಆದರೆ ಚುಚ್ಚಿನೋಯಿಸುವುದಿಲ್ಲ, ನಿದ್ರೆಯಿಂದ, ಆಲಸ್ಯದಿಂದ, ಜಡತೆಯಿಂದ ಎಬ್ಬಿಸುವಂತೆ- ವಿಷಯಗಳು ಸಾಮಯಿಕವಾಗಿವೆ; ಸಮಸ್ಯೆಗಳ ವಿಶ್ಲೇಷಣೆ ಅರ್ಥಪೂರ್ಣ ಆಗಿವೆ.

ಮೈಸೂರು **ರಾ. ಸತ್ಯನಾರಾಯಣ**

ನಾನು ನಿಮ್ಮ ಪತ್ರಿಕೆ "ಜನಪದ ವಿಚಾರ"ದ ಚಂದಾದಾರನಾಗಿದ್ದು ನಿಮ್ಮ ಲೇಖನಗಳು, ವಿಚಾರಗಳು ನನಗೆ ಹಿಡಿಸಿವೆ.

ಕೋಡೂರು **–ಕೆ. ರಾಜೇಶ**

೩ನೇ ಪುಟದಿಂದ
ಭಾವಿಸಿ ಅದರಂತೆ ನಡೆಯುವುದರಲ್ಲಿಯೇ ಅವನ ಶ್ರೇಯಸ್ಸಿದೆಯೆಂದು ತಿಳಿಯಲಿ.

ಕನ್ನಡಕ್ಕೆ ಗಂಡಾಂತರ ಬಂದಿದೆ, ಅದನ್ನು ಉಳಿಸಬೇಕು ಎಂಬ ಮಾತು ಇಂದು ನಿನ್ನೆಯದಲ್ಲ ಮತ್ತು ಉಳಿಸುವ ಸಂಬಂಧವಾಗಿ ಆಯಾ ಕಾಲಕ್ಕೆ ತಕ್ಕಂತೆ ಪ್ರತಿಭಟನೆಯ ಮಾತು ಮತ್ತು ಎಚ್ಚರಿಕೆಯ ಮಾತುಗಳು ಹಾಗೂ ಕೆಲವೊಮ್ಮೆ ಹೋರಾಟಗಳೂ ನಡೆದಿವೆ. ಕನ್ನಡದ ಉಳಿವನ್ನು ಕುರಿತು ಇದು ವರೆಗೆ ನಡೆದ ಎಲ್ಲ ಕನ್ನಡ ಸಾಹಿತ್ಯ ಸಮ್ಮೇಳನಗಳಲ್ಲಿ ಪ್ರಸ್ತಾಪ ಬರದೇ ಇಲ್ಲ. ಆದರೆ ಇಂದಿನ ಹೈ ಟೆಕ್ ಯುಗದಲ್ಲಿ ಕನ್ನಡವನ್ನು ಉಳಿಸಿಕೊಳ್ಳ ಬೇಕೆಂಬ ಮಾತು ಹೆಚ್ಚು ಮಹತ್ವಪಡೆಯುತ್ತದೆ. ಆದರೆ ಆ ಮಾರ್ಗ ಯಾವುದು ಎಂಬುದು ಕೂಡಲೆ ನಿರ್ಧಾರವಾಗಬೇಕಿದೆ. ಸಧ್ಯಕ್ಕೆ ಆ ಬಗ್ಗೆ ತೋರುವ ಮಾರ್ಗಗಳು ಎರಡು:–

ಒಂದನೇಯದು, ಹೊರಗಿನ ತಂತ್ರಜ್ಞಾನ ಮತ್ತು ವಿಶ್ವೀಕರಣದ ಸಂದರ್ಭದಲ್ಲಿ ಕನ್ನಡವನ್ನು ಅದಕ್ಕೆ ತಕ್ಕಂತೆ ಸಮರ್ಥವನ್ನಾಗಿ ಮಾಡುವುದು.

ಎರಡನೇಯದು, ಇಂಗ್ಲೀಷಿನ ಜೊತೆಗೆ ಅಥವಾ ಇದರ ಬೆನ್ನಹಿಂದೆ ನಡೆದುಕೊಂಡು ಬರುವಂಥ ಭಾಷೆಯನ್ನಾಗಿ ಉಳಿಸಿಕೊಂಡು ಬರುವುದು.

ಮೇಲೆ ಹೇಳಲಾದ ಯಾವ ಮಾರ್ಗವು ಕನ್ನಡಿಗರ ಹಿತಕ್ಕೆ ಹೆಚ್ಚು ಪ್ರಯೋಜನಕರ ಮತ್ತು ಲಾಭಕರ ಎಂಬ ಬಗ್ಗೆ ಎಲ್ಲ ಅರ್ಹ ಹಂತಗಳಲ್ಲಿ ವಿಚಾರ ವಿಮರ್ಷೆ ನಡೆಯಬೇಕು. ಅನಂತರ ಬರಲಾದ ತೀರ್ಮಾನಕ್ಕೆ ತಕ್ಕಂತೆ ರಾಜ್ಯ ಸರಕಾರದ ನೀತಿ, ಶಿಕ್ಷಣ ನೀತಿ, ಉದ್ಯಮ ನೀತಿ ಎಲ್ಲವೂ ನಿರ್ಧಾರಗೊಳ್ಳಬೇಕು.

ಈಗ ಇತ್ತೀಚೆಗೆ ಕರ್ನಾಟಕ ಸರ್ಕಾರ ಕನ್ನಡ ಮಾಧ್ಯಮದ ವಿದ್ಯಾರ್ಥಿ ಗಳಿಗೆ ತಾಂತ್ರಿಕ ಶಿಕ್ಷಣದಲ್ಲಿ ಮೀಸಲಾತಿ ಕೊಡುವುದಾಗಿ ಹೇಳಿದೆ; ಅಲ್ಲದೆ ಬರಗೂರು ಸಮಿತಿಯು ಪೂರ್ವ ಪ್ರಾಥಮಿಕ ಶಿಕ್ಷಣದಿಂದಲೇ ಕನ್ನಡ ಮಾಧ್ಯಮ ಕಡ್ಡಾಯವಾಗಬೇಕೆಂದು ಹೇಳಿದೆ. ಕರ್ನಾಟಕವು ಕನ್ನಡ ಭಾಷೆಯನ್ನು ರಾಜ್ಯ ಭಾಷೆಯನ್ನಾಗಿ ಘೋಷಿಸಿದೆ; ಕನ್ನಡ ವಿಶ್ವವಿದ್ಯಾನಿಲಯದ ಉಪಕುಲಪತಿ ಡಾ॥ ಕಲಬುರ್ಗಿ ಕನ್ನಡದ ರಕ್ಷಣೆಗೆ, ಬೆಳವಣಿಗೆಗೆ ಒಂದು ಹೋರಾಟವನ್ನೇ ನಡೆಸಬೇಕೆಂದು ಹೇಳಿದ್ದಾರೆ.

ಈ ರೀತಿ ಕನ್ನಡದ ಉಳಿವಿನ ಮಾತು ನಡೆಯುತ್ತಿರುವಾಗಲೇ ನಾಗಾಲೋಟದಲ್ಲಿ ತಾಂತ್ರಿಕತೆ ಮುನ್ನಡೆಯುತ್ತಿದೆ, ವಿಶ್ವದ ವ್ಯವಹಾರಗಳು ಸಂಕೀರ್ಣಗೊಳ್ಳುತ್ತ ಸಾಗಿವೆ. ಕರ್ನಾಟಕದಲ್ಲಿ ಕನ್ನಡದ ಸ್ಥಾನಮಾನದಬಗ್ಗೆ ಅಂತಿಮವಾಗಿ ತೀರ್ಮಾನ ಕೈಗೊಳ್ಳುವ ಕಾಲ ಬಂದಿದೆ. ಇಂದಿನ ಅಸಂದಿಗ್ಧ ಪರಿಸ್ಥಿತಿ ಕನ್ನಡದ ಮಕ್ಕಳಿಗೆ ಕಂಟಕವಾದೀತು. ★

FORM IV (See Rule 8)

1. Place of Publication	: Melkote
2. Periodicity of its publication	: Monthly
3. Printer's Name	: Surendra Koulagi
Whether citizen of India?	: Yes
If foreigner, state the country of origin	: Does not apply
Address	: Kalyani Street : Melkote 571 431 : Mandya Dist.
4. Publisher's Neme	: Surendra Koulagi
Whether citizen of India?	: Yes
If foreigner, state the country of origin	: Does not apply
Address	: As above
5. Editor's Name	: Surendra Koulagi
Whether citizen of India	: Yes
If foreigner, state the country of origin	: Does not apply
Addres	: As above
6 Names and Addresses of individuals who own the news paper and partners & share holders holding More than one pecent of the total capital.	: Janapada Seva : Trust, Kalyani street : Melkote : Mandya dist. :

I, Surendra Koulagi hereby declare that the particulars given above are true to the best of my knowledge and belief.

Sd : Surendra Koulagi

KA-SK-MND-470/2000 ತೆರೆದ_ಅಂಚೆ

Janapada Vichara–Kannada Monthly Digest. Fedruary 2001
Vol 1 Issue 7.

To

ಜನಪದ ಸೇವಾ ಟ್ರಸ್ಟ್ ಪರವಾಗಿ ಸುರೇಂದ್ರ ಕೌಲಗಿ ಅವರಿಂದ ಜನಪದ ಸೇವಾ ಟ್ರಸ್ಟ್ ಮುದ್ರಣಾಲಯ ಮೇಲುಕೋಟೆಯಲ್ಲಿ ಸಂಪಾದಿತವಾಗಿ, ಮುದ್ರಿತವಾಗಿ ಪ್ರಕಟಿಸಲ್ಪಟ್ಟಿತು.